ಸಿ. ನಂಜುಂಡಪ್ಪ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ಪ್ರಕಟಣೆ.

ತ್ರಿಪುರ

ಪ್ರಜಾಸತ್ತೆಯ ಮೇಲೆ ಆಕ್ರಮಣ

ಲೇಖಕರು : ಸಿ. ನಂಜುಂಡಪ್ಪ

ಈಶಾನ್ಯ ಭಾರತದಲ್ಲಿರುವ ಪುಟ್ಟ ರಾಜ್ಯವೊಂದು ಸ್ವತಂತ್ರ ಭಾರತದಲ್ಲಿ ನಡೆದ ಮೊಟ್ಟ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ತನ್ನ ಎರಡೂ ಲೋಕ ಸಭಾ ಸ್ಥಾನಗಳಿಂದ-ಅವೆರಡರಲ್ಲಿ ಒಂದು ಹರಿಜನರಿಗೆ ಮೀಸಲಿಟ್ಟ ಸ್ಥಾನ, ಇನ್ನೊಂದು ಗಿರಿಜನರಿಗೆ ಮೀಸಲಿಟ್ಟ ಸ್ಥಾನ-ಕಮ್ಯುನಿಸ್ಟ್ ಉಮೇದು ವಾರರನ್ನು ಗೆಲ್ಲಿಸಿ ಎಲ್ಲರನ್ನು ದಂಗುಬಡಿಸಿತ್ತು. ಮತ್ತೆ 1977ರ ಡಿಸೆಂಬರ್ ನಲ್ಲಿ-ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರವಿದ್ದಾಗ-ನಡೆದ ವಿಧಾನಸಭಾ ಚುನಾವಣೆಯಲ್ಲಿ ತ್ರಿಪುರವು ಚುನಾವಣಾ ಇತಿಹಾಸದಲ್ಲಿ ಒಂದು ದಾಖಲೆ ಯನ್ನೇ ಸ್ಥಾಪಿಸಿತು. ಈ ಚುನಾವಣೆಯಲ್ಲಿ ಎಡಪಕ್ಷಗಳಲ್ಲದ ಯಾವುದೇ ರಾಷ್ಟ್ರೀಯ ಪಕ್ಷಕ್ಕೆ, ಕಾಂಗ್ರೆಸ್ಸೂ ಸೇರಿದಂತೆ, ಒಂದು ಸ್ಥಾನವೂ ಸಿಗಲಿಲ್ಲ. ಸಿ.ಪಿ.ಐ (ಎಂ) ನೇತೃತ್ವದ ಎಡರಂಗಕ್ಕೆ ವಿಧಾನಸಭೆಯ 60ಸ್ಥಾನಗಳಲ್ಲಿ 48 ಸ್ಥಾನಗಳು [illegible], ಫಾರ್ವರ್ಡ್ ಬ್ಲಾಕ್‌ಗಳಿಗೆ 3 [illegible] ಪಕ್ಷೇತರರಿಗೆ 5 ಸ್ಥಾನಗಳೂ ಸಿ[illegible] ತ್ರಿಪುರ ಉಪಜಾತಿ ಜುಬಸಮಿತಿ ಎ[illegible] ಧೋರಣೆಯ ಪ್ರಾದೇಶಿಕ ಪಕ್ಷ ವ[illegible] ಅದು ವಿರೋಧ ಪಕ್ಷವಾಯಿತು.

1978ರ ಜೂನ್ ತಿಂಗಳಿನಲ್ಲಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಗೆದ್ದ 689 ಪ್ರಧಾನರಲ್ಲಿ ಸಿ.ಪಿ.ಐ.(ಎಂ)ಗೆ ಸೇರಿದವರು 467, ಆರ್.ಎಸ್.ಪಿ. 4, ಫಾರ್ವರ್ಡ್ ಬ್ಲಾಕ್ ಒಂದು, ಕಾಂಗ್ರೇಸ್(ಐ) 17, ಪಕ್ಷೇತರರು 139, ಟಿ.ಯು.ಜೆ.ಎಸ್.ಗೆ ಸೇರಿದವರು 61.

ತ್ರಿಪುರದ ವಿಸ್ತೀರ್ಣ 10,360 ಕಿ.ಮೀ. ಜನ ಸಂಖ್ಯೆ 24 ಲಕ್ಷ. ಇವರಲ್ಲಿ ಶೇಕಡ 15 ಹರಿಜನರು ಹಾಗೂ ಶೇ. 29 ಗಿರಿಜನರು ಉತ್ತರದ ಸ್ವಲ್ಪ ಭಾಗವನ್ನು ಬಿಟ್ಟರೆ ಉಳಿದೆಲ್ಲ ಕಡೆಗಳಿಂದಲೂ ಬಾಂಗ್ಲಾ ದೇಶದಿಂದ ಸುತ್ತು ವರಿಯಲ್ಪಟ್ಟಿರುವ ಈ ರಾಜ್ಯದಲ್ಲಿ ಆಧುನಿಕ ಕೈಗಾರಿಕೆ ಯಾವುದೂ ಇಲ್ಲ. ಹೀಗಾಗಿ ಭಾರತದ ಹಿರಿಯಬಂಡವಾಳಗಾರರ ಲಕ್ಷ್ಯ ತ್ರಿಪುರದತ್ತ ಹೋಗಿರ ಲಿಲ್ಲ. 1982ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿಯೂ ಸಹ ಎಡ ರಂಗವು ಗೆದ್ದಿತು.

1987ರ ಡಿಸೆಂಬರಿನಲ್ಲಿ ನಡೆಯ ಬೇಕಿದ್ದ ವಿಧಾನಸಭಾ ಚುನಾವಣೆ ಯನ್ನು ಅದೇ ತಿಂಗಳ ಕೊನೆಯ ವಾರದಲ್ಲಿ ನಡೆಸಬೇಕೆಂದು ಮುಖ್ಯ ಚುನಾವಣಾ ಕಮಿಷನರಿಗೆ ಎಡರಂಗ ಸರ್ಕಾರವು ಶಿಫಾರಸ್ಸು ಮಾಡಿತು. ಅಧಿಕಾರದಲ್ಲಿರುವ ಪಕ್ಷದ ಅಥವಾ ಪಕ್ಷಗಳ ಶಿಫಾರಸ್ಸನ್ನು ಒಪ್ಪಿ ಕೊಳ್ಳುವುದು ಈವರೆವಿಗೆ ನಡೆದುಕೊಂಡು ಬಂದ ರೂಢಿ. ಆದರೆ ಈ ಭಾರಿ ಮುಖ್ಯ ಚುನಾವಣಾ ಕಮಿಷನರ್ ಪೆರಿಶಾಸ್ತ್ರಿ ಈಶಾನ್ಯ ಭಾರತದ ಮತ್ತೊಂದು ರಾಜ್ಯ ವಾದ ಮೇಘಾಲಯಕ್ಕೆ ಚುನಾವಣೆ ನಡೆಸುವ ದಿನವೇ ತ್ರಿಪುರ ವಿಧಾನ ಸಭೆಗೂ ಚುನಾವಣೆ ನಡೆಸಲು ನಿರ್ಧರಿಸಿ ಬಿಟ್ಟರು. ಹೀಗೆ ರಾಜ್ಯ ಸರ್ಕಾರದ ಶಿಫಾರಸಿನ ತಾರೀಖಿನ 5 ವಾರಗಳ ನಂತರ 1988ರ ಫೆಬ್ರವರಿ ತಿಂಗಳಿನ 2ನೇ ತಾರೀಖು ಈ ಎರಡೂ ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆ ನಡೆಯಿತು.

ಈ ಬಾರಿ ತ್ರಿಪುರ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ, ಒಂದು ದಾಖಲೆಯೇ ಸ್ಥಾಪನೆಯಾಯಿತು. ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ಮಾಡದೆಯೇ ಮತದಾನದ 3 ದಿವಸಗಳ ಮೊದಲು ಇಡೀ ತ್ರಿಪುರ ರಾಜ್ಯವನ್ನೇ ಗಲಭೆ ಪೀಡಿತ ಪ್ರದೇಶ

ವೆಂದು ಘೋಷಿಸಿ ಬಿಟ್ಟರು. ಗಲಭೆ ಪೀಡಿತ ಪ್ರದೇಶವನ್ನಾಗಿ ಘೋಷಿಸಿದ ತ್ರಿಪುರಾಕ್ಕೆ ಸೈನ್ಯವನ್ನು ಕಳುಹಿಸಿದರು. ಶೇ. 47ರಷ್ಟು ಮತಗಳಿಸಿದ ಕಾಂಗ್ರೆಸ್ ಟಿ ಯು.ಜೆ.ಎಸ್. ಮೈತ್ರಿಯು, ಶೇ. 50ಕ್ಕಿಂತಲೂ ಹೆಚ್ಚು ಮತಗಳಿಸಿದ ಎಡರಂಗದಿಂದ ಅಧಿಕಾರವನ್ನು ಕಸಿದು ಕೊಂಡಿತು. ಇದು ಹೇಗಾಯಿತು ? ಎಂದು ತಿಳಿಯುವ ಮುನ್ನ ತ್ರಿಪುರದ ಬಗ್ಗೆ ಒಂದು ದಶಕದ ಕಾಲ ಅಧಿಕಾರ ದಲ್ಲಿದ್ದ ತ್ರಿಪುರ ಎಡರಂಗ ಸರಕಾರದ ಆಡಳಿತದ ಬಗ್ಗೆ ಸ್ವಲ್ಪ ವಿಚಾರ ಮಾಡೋಣ :

ಮಹಾಭಾರತದ ಕಾಲದಿಂದಲೂ ತ್ರಿಪುರ ಇದ್ದಿತೆಂದು ಪುರಾಣಗಳು ಹೇಳುತ್ತವೆ. ಬ್ರಿಟಿಷ್ ವಸಾಹತುಶಾಹಿಗಳಲ್ಲು ಭಾರತವನ್ನು ಭಾರತ-ಪಾಕಿಸ್ತಾನ ಎಂದು ಒಡೆದು, ಭಾರತದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರವನ್ನು ಹಸ್ತಾಂತರಿಸಿ ಹೋದ ನಂತರ ತ್ರಿಪುರ ರಾಜ್ಯವು ಭಾರತದೊಂದಿಗೆ ವಿಲೀನ ವಾಯಿತು. ಆ ಹಿಂದಿನ 1300 ವರ್ಷಗಳಲ್ಲಿ ತ್ರಿಪುರವನ್ನು ರಾಜಮಹಾ ರಾಜರುಗಳು ಆಳಿದರು. ತ್ರಿಪುರದ ಮೂಲ ನಿವಾಸಿಗಳು 19 ಬುಡಕಟ್ಟು ಗಳ ಗಿರಿಜನರು ಪಾಕಿಸ್ತಾನದ ರಚನೆಯ ನಂತರ ಪೂರ್ವ ಪಾಕಿಸ್ತಾನದಿಂದ ವಲಸೆ ಬಂದು ತ್ರಿಪುರದಲ್ಲಿ ನೆಲೆಸಿದ ಬಂಗಾಳಿಗಳು ಕಾಲ ಕ್ರಮೇಣ ತ್ರಿಪುರದ ಗಿರಿಜನರಿಗಿಂತಲೂ ಹೆಚ್ಚಾದರು. ಸಾಮಾನ್ಯವಾಗಿ ಗಿರಿಜನರು ಒಳಪ್ರದೇಶ ಗಳಲ್ಲಿರುವ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಅವರು ವಾಸಿಸುವ ಮನೆ, ಅಲ್ಲಿ ಹೇರಳವಾಗಿ ಬೆಳೆಯುವ ಬೊಂಬುಗಳಿಂದ ತಯಾರಾದುದು. ಐದರಿಂದ ಆರು ಅಡಿ ಎತ್ತರವಿರುವ ಈ ಮನೆಗೆ 'ಟೊಂಗ್' ಎಂದು ಕರೆಯುತ್ತಾರೆ. ತ್ರಿಪುರದ ಜನರಿಗೆ ತಮ್ಮವೇ ಆದ ಸಂಗೀತ, ನೃತ್ಯಗಳಿವೆ. ತ್ರಿಪುರದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಕವಿ ರವೀಂದ್ರರಿಗೆ ಅಪಾರವಾದ ಗೌರವವಿದ್ದಿತು.

ಕಾಂಗ್ರೆಸ್ ಪಕ್ಷವು 30 ವರ್ಷಗಳ ಕಾಲ ತ್ರಿಪುರವನ್ನು ಆಳಿದರೂ ಸಹ ತ್ರಿಪುರದ ಹಿಂದುಳಿದಿರುವಿಕೆಯನ್ನು ನಿವಾರಿಸಲು ಏನನ್ನೂ ಮಾಡಲಿಲ್ಲ. ತ್ರಿಪುರದ ರಾಜಧಾನಿ ಅಗರ್ತಲ ಪಟ್ಟಣದವರೆಗೆ ರೈಲು ಮಾರ್ಗವನ್ನು ನಿರ್ಮಿ ಸುವ ವಿಚಾರ ಕೂಡ ಮಾಡಲಿಲ್ಲ. ಆಧುನಿಕ ಕೈಗಾರಿಕೆಯೊಂದನ್ನೂ ಸ್ಥಾಪಿಸ

ಲಿಲ್ಲ. 1977ರ ಡಿಸೆಂಬರಿನಲ್ಲಿ ಎಡರಂಗವು ಗೆದ್ದು ಅಧಿಕಾರವನ್ನು ವಹಿಸಿ ಕೊಂಡಾಗಿನಿಂದಲೂ ಕೇಂದ್ರ ಸರ್ಕಾರವನ್ನು ಸತತವಾಗಿ ಕೇಳಿ ಕೊಳ್ಳುವುದರ ಜೊತೆಗೆ ರೈಲು ಮಾರ್ಗದ ನಿರ್ಮಾಣಕ್ಕೆ ಬೇಕಾದ ಭೂಮಿಯನ್ನು ಅತ್ಯಂತ ಕಾಲದಲ್ಲಿ ಪುಕ್ಕಟೆಯಾಗಿ ಎಡರಂಗ ಸರ್ಕಾರವು ರೈಲ್ವೆ ಮಂಡಳಿಗೆ ಕೊಟ್ಟಿತು. ಆದರೂ ಸಹ 1987ರ ಕೊನೆಯುವರೆಗೆ ಧರ್ಮನಗರದಿಂದ ಪೆಚಾರ್ತಲ್‌ವರೆಗೆ 23.5 ಕಿ.ಮೀ.) ಮಾತ್ರ ರೈಲ್ವೆ ಮಾರ್ಗ ನಿರ್ಮಾಣವಾಯಿತು. ಇಲ್ಲಿಂದ ಅಗರ್ತಲ ಇನ್ನೂ ದೂರವಿದೆ.

ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತ್ರಿಪುರದ ಎರಡು ಮುಖ್ಯ ಜನವಿಭಾಗವಾದ ಗಿರಿಜನರು ಮತ್ತು ಬಂಗಾಳಿಗಳ ನಡುವೆ ಸುಮಧುರ ಸಂಬಂಧವನ್ನು ಬೆಳೆಸಿ ಕಾಪಾಡುವುದಕ್ಕೆ ವಿಶೇಷವಾದ ಗಮನವನ್ನು ಕೊಟ್ಟಿತು. ಜನರನ್ನು ಧರ್ಮ, ಜಾತಿ, ಭಾಷೆ, ಜನಾಂಗ, ಕುಲ, ಪ್ರಾದೇಶಿಕತೆಗಳ ಆಧಾರದ ಮೇಲೆ ಒಡೆದು ವಿಭಜಿಸುವುದು ಸಾಮ್ರಾಜ್ಯಶಾಹಿಗಳ ತಂತ್ರ. 'ಒಡೆದು ಆಳು' ಎಂದು ಬ್ರಿಟಿಷ್ ನಾಣ್ಣುಡಿಯೇ ಇದೆಯಲ್ಲ ತ್ರಿಪುರದ ಜನತೆಯ ಐಕ್ಯತೆಯನ್ನು ಒಡೆಯುವ ಕೆಲಸವೂ ಸಹ ಸಾಮ್ರಾಜ್ಯಶಾಹಿಗಳ ಅಪ್ರತ್ಯಕ್ಷ ಪ್ರೇರಣೆಯಿಂದ ನಡೆಯುತ್ತಲೇ ಇದೆ. ತ್ರಿಪುರದಲ್ಲಿ ' ತ್ರಿಪುರ ಉಪಜಾತಿ ಜುಬ ಸಮಿತಿ ಗಿರಿಜನರನ್ನು ಬಂಗಾಳಿಗಳ ವಿರುದ್ಧ ಎತ್ತಿ ಕಟ್ಟುವ ಕೆಲಸ ಒಂದು ಕಡೆಯಿಂದ ಮಾಡಿದರೆ, ಬಂಗಾಳಿಗಳನ್ನು ಗಿರಿಜನರ ವಿರುದ್ಧ ಎತ್ತಿ ಕಟ್ಟುವ ಕೆಲಸವನ್ನು ಆನಂದ ಮಾರ್ಗಿಗಳ ರಾಜಕೀಯ ಪಕ್ಷವಾದ ' ಅಮ್ರಾ ಬಂಗಾಲಿ ' ಗಳು ಮಾಡುತ್ತಿದ್ದಾರೆ. ಸಾಮ್ರಾಜ್ಯ ಶಾಹಿಗಳು ಅಪ್ರತ್ಯಕ್ಷವಾಗಿ ಈ ಎರಡೂ ಪಕ್ಷಗಳಿಗೆ ಸಹಾಯ ಮಾಡುತ್ತಾರೆ. ತನ್ನ ಅನುಕೂಲಕ್ಕೆ ಅನುಗುಣವಾಗಿ ಕಾಂಗ್ರೆಸ್ ಪಕ್ಷವು ' ಅಮ್ರಾ ಬಂಗಾಲಿ'ಗಳ ಜೊತೆ, ' ಟಿ. ಯು. ಜೆ. ಎಸ್. ' ಜೊತೆ ಸೇರುತ್ತದೆ. ಇವರೆಲ್ಲರೂ ಒಂದು ವಿಷಯದಲ್ಲಿ ಒಂದಾಗುತ್ತಾರೆ. ಅದೇನೆಂದರೆ, ಸಿ. ಪಿ. ಐ.(ಎಂ) ನೇತೃತ್ವದ ಎಡರಂಗವನ್ನು, ಎಡರಂಗದ ಸರ್ಕಾರವನ್ನು ವಿರೋಧಿಸುವ ವಿಷಯದಲ್ಲಿ ಅವರೆಲ್ಲರೂ ಬಂದು ಬಾಂಗ್ಲಾದೇಶ ದಿಂದ ದಿನ ನಿತ್ಯ ವಲಸೆ ಬರುವ 'ಚಕ್ಮಾ' ಗಿರಿ ಜನರು ಮತ್ತು ಬಂಗಾಳಿಗಳು ತ್ರಿಪುರದಲ್ಲಿ ನೆಲೆಸಲು ಪ್ರಯತ್ನಿಸುತ್ತಾರೆ. ಬಹಳ ಹಿಂದಿನಿಂದ ವಲಸೆ

ಬಂದವರಲ್ಲಿ ಅನೇಕರು ಬೇಸಾಯಗಾರರಾದರು. ಬೇಸಾಯ ಮಾಡಲು ಭೂಮಿ ಬೇಕಲ್ಲವೇ ? ಗಿರಿಜನರು ಕೃಷಿ ಮಾಡುತ್ತಿದ್ದ ಭೂಮಿಯು ಹೊರಗಿನಿಂದ ಬಂದು ನೆಲೆಸಿದವರ ಪಾಲಾಗುತ್ತಾ ಬಂದಿತು. ಅಕ್ರಮವಾಗಿ ಪರಭಾರೆಯಾಗಿದ್ದ ಭೂಮಿ ಮೂಲ ಒಕ್ಕಲಿಗೆ ಸಿಗಬೇಕಲ್ಲವೇ ? ಈ ಪರಿಸ್ಥಿತಿಯಲ್ಲಿ ಎಡರಂಗ ಸರ್ಕಾರವು ಗಿರಿಜನರ ಮತ್ತು ಬಂಗಾಳಿಗಳ ನಡುವೆ ಸುಮಧುರ ಸಂಬಂಧವನ್ನು ಕಾಪಾಡಿದುದು ನಮ್ಮ ದೇಶದ ಅದ್ಭುತಗಳಲ್ಲಿ ಒಂದು ಎಂದು ಹೇಳಬಹುದು. ಇದು ಸುಲಭದ ಕೆಲಸವೇನಲ್ಲ. ದೇಶದಐಕ್ಯತೆ ಮತ್ತು ಸಮಗ್ರತೆಗಳ ರಕ್ಷಣೆಗಾಗಿ ಎಡರಂಗವು ನಡೆಸುತ್ತಾ ಬಂದಿರುವ ಹೋರಾಟದಲ್ಲಿ ಎಡರಂಗದ, ಅದರಲ್ಲೂ ಮುಖ್ಯವಾಗಿ ಸಿ. ಪಿ. ಐ.(ಎಂ) ನ ನೂರಾರು ಮಂದಿ ಕಾರ್ಯಕರ್ತರು ಪ್ರಾಣಾರ್ಪಣೆ ಮಾಡಿದ್ದಾರೆ.

ಗಿರಿಜನರ ಏಳಿಗೆಗಾಗಿ ಪ್ರತ್ಯೇಕ ಜಿಲ್ಲಾ ಮಂಡಳಿಯನ್ನು ಎಡರಂಗ ಸರ್ಕಾರವು ರಚಿಸಿ ಸ್ವಯಮಾಡಳಿತೆಗೆ ಮತ್ತು ಅಧಿಕಾರದ ವಿಕೇಂದ್ರೀ ಕರಣಕ್ಕೆ ಅನುವು ಮಾಡಿ ಕೊಟ್ಟು ಪ್ರಯತ್ನ ಪೂರ್ವಕವಾಗಿ ಜಿಲ್ಲಾ ಮಂಡಳಿಯನ್ನು ಸ್ಥಾಪಿಸಿದ ಶಾಸನವನ್ನು ಭಾರತದ ಸಂವಿಧಾನದ ಆರನೇ ಪರಿಚ್ಛೇದದಲ್ಲಿ ಸೇರಿಸಿತು. ಇದರಿಂದಾಗಿ ಜಿಲ್ಲಾ ಮಂಡಳಿಯ ರಚನೆ ಮತ್ತು ಅಸ್ತಿತ್ವಗಳನ್ನು ಯಾರೂ ಸಹ ನ್ಯಾಯಾಲಯಗಳಲ್ಲಿ ಪ್ರಶ್ನಿಸಲು ಅದಕ್ಕೆ ಅಡ್ಡಿಯುಂಟು ಮಾಡಲು ಸಾಧ್ಯವಿಲ್ಲದಂತಾಯಿತು.

ಎಡರಂಗ ಸರ್ಕಾರವು ತ್ರಿಪುರದ ಗಿರಿಜನರ ಭಾಷೆಯಾದ 'ಕೋಕ್ ಬರೋಕ್' ಭಾಷೆಗೆ ಮನ್ನಣೆಯನ್ನು ಕೊಟ್ಟು, ಈ ಭಾಷೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣವನ್ನು ಕೊಡಲು ಒಂದು ಸಾವಿರಕ್ಕಿಂತಲೂ ಹೆಚ್ಚು ಉಪಾಧ್ಯಾಯರನ್ನು ನೇಮಿಸಿತು.

1980 ರ ವೇಳೆಗೆ 'ಟ್ರೈಬಲ್ ನ್ಯಾಷನಲ್ ವಾಲಂಟಿಯರ್ಸ್' (ಟಿ ಎನ್. ವಿ.) ಎಂಬ ಉಗ್ರಗಾಮಿ ಪ್ರತ್ಯೇಕತಾವಾದಿ ಸಂಸ್ಥೆಯು ಬಾಂಗ್ಲಾ ದೇಶದ ಗಡಿಯಾಚೆ ತನ್ನ ನೆಲೆಯನ್ನು ಇಟ್ಟು ಕೊಂಡು ತ್ರಿಪುರದ ಮೇಲೆ ಧಾಳಿ

ಮಾಡಲಾರಂಭಿಸಿತು. 1980 ರ ನಡುವೆ ನಡೆದ ಕುಲಸಂಬಂಧಿ ಹತ್ಯಾ ಕಾಂಡದಲ್ಲಿ 500 ಕ್ಕಿಂತಲೂ ಹೆಚ್ಚು ಜನ ಮಹಿಳೆಯರು ಮುದುಕರು ಮತ್ತು ಮತ್ತು ಮಕ್ಕಳು ಕೊಲೆಯಾದರು ಗಿರಿಜನರ ಪ್ರತ್ಯೇಕತೆ ಮತ್ತು ತೀವ್ರಗಾಮಿ ತನಗಳ ವಿರುದ್ಧವಾಗಿ ಸಿ. ಪಿ. ಐ (ಎಂ). ತತ್ವಬದ್ಧವಾದ ರಾಜಕೀಯ ಹೋರಾಟವನ್ನು ನಡೆಸಿತು ಇದರ ಪರಿಣಾಮವಾಗಿ 'ಬಿನಂದ ಜಮಾಲೆಯಾ' ಎಂಬ ಉಗ್ರಗಾಮಿಯು ರಾಜ್ಯ ಸರ್ಕಾರಕ್ಕೆ ಶರಣಾಗತರಾಗಿ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಉಪಜಾತಿ ಗಣಮುಕ್ತಿ ಪರಿಷತ್ತನ್ನು ಸೇರಿದರು. ಎರಡನೆಯದಾಗಿ ಟಿ. ಯು. ಜೆ. ಎಸ್. ನಲ್ಲಿ ಒಡಕುಂಟಾಗಿ ಟಿ. ಯು. ಜೆ. ಎಸ್. ಕಾಂಗ್ರೆಸ್ಸಿ ನೊಂದಿಗೆ ಮೈತ್ರಿ ಮಾಡಿಕೊಳ್ಳುವುದನ್ನು ವಿರೋಧಿಸುವ ವಿಭಾಗವು ಸಿಡಿದು ಹೋಗಿ 'ತ್ರಿಪುರಾ ಹಿಲ್ಸ್ ಪೀಪಲ್ಸ್ ಪಾರ್ಟಿ'ಯ ರಚನೆಯಾಯಿತು.

ಬಾಂಗ್ಲಾದೇಶದಿಂದ ಆಗಾಗ್ಗೆ ಧಾಳಿ ಮಾಡುವ ಟಿ. ಎನ್. ವಿ. ಯನ್ನು ಎದುರಿಸಿ ಹಿಮ್ಮೆಟ್ಟಿಸಲು ಎಡರಂಗ ಸರ್ಕಾರವು ಸಶಸ್ತ್ರ ಪಡೆಗಳನ್ನು ಒದಗಿಸ ಬೇಕೆಂದು ಭಾರತ ಸರ್ಕಾರವನ್ನು ಕೇಳಿಕೊಂಡಿತು. ಎರಡು ಬಟಾಲಿಯನ್ ಅಸ್ಸಾಂ ರೈಫಲ್ಸನ್ನು ಕಳುಹಿಸುವುದಾಗಿ ಭಾರತ ಸರ್ಕಾರವು ಆಶ್ವಾಸನೆ ಕೊಟ್ಟನಂತರ ಎರಡು ವರ್ಷಗಳ ಮೇಲೆ ಅವುಗಳನ್ನು ಕಳುಹಿಸಿತು. ಹೊರಗಿನಿಂದ ಭಯೋತ್ಪಾದಕರು ತ್ರಿಪುರಾವನ್ನು ಪ್ರವೇಶಿಸುವುದನ್ನು ತಡೆಯಲು ಭಾರತ ಸರ್ಕಾರಕ್ಕೆ ಮನಸ್ಸಿರಲಿಲ್ಲ.

ಅಧಿಕಾರವನ್ನು ವಿಕೇಂದ್ರೀಕರಣಮಾಡಿ ಪಂಚಾಯತ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿ ಎಡರಂಗ ಸರ್ಕಾರವು ಗ್ರಾಮ ಪಂಚಾಯಿತಿಗಳಿಗೂ ರೈತ ಸಂಘಟನೆಗೂ ಹೊಂದಾಣಿಕೆ ಇರುವಂತೆ ನೋಡಿ ಕೊಂಡಿತು. ಸಹಕಾರ ಕ್ಷೇತ್ರದಲ್ಲಿ ತ್ರಿಪುರದ ಎಡರಂಗ ಸರ್ಕಾರದ ಸಾಧನೆ ಗಣನೀಯವಾದುದು. ರಬ್ಬರ್ ತೋಟಗಳನ್ನು, ಕಾಫಿ ಮತ್ತು ಟೀ ತೋಟ ಗಳನ್ನು ಸಹಕಾರಿ ಕ್ಷೇತ್ರದಲ್ಲಿ ನಡೆಸಲು ಎಡರಂಗ ಸರ್ಕಾರವು ಸಹಾಯ ಮಾಡಿತು. ಹರಿಜನರ ಮತ್ತು ಇತರ ಅಲ್ಪಸಂಖ್ಯಾತರ ಮುಸ್ಲಿಮರ ಮತ್ತು ಹಿಂದುಳಿದವರ ಹಿತ ದೃಷ್ಟಿಯಿಂದ ಹತ್ತು ವರ್ಷಗಳ ಅವಧಿಯಲ್ಲಿ ಎಡರಂಗ

ಸರ್ಕಾರವು ಅನೇಕ ಸಹಕಾರ ಸಂಘಗಳನ್ನು ಸ್ಥಾಪಿಸಲು. ಬೆಸ್ತರ ನಡುವೆ 120 ಸಹಕಾರ ಸಂಘಗಳು ಮೂಡಿ ಬಂದವು. ನೇಕಾರರ ನಡುವೆ 100 ಕ್ಕಿಂತಲೂ ಹೆಚ್ಚು ಸಹಕಾರ ಸಂಘಗಳು ಸ್ಥಾಪನೆಯಾದವು. ಎಡರಂಗ ಸರ್ಕಾರವು ಸಹಕಾರ ಸಂಘಗಳಿಗೆ ವಿವಿಧ ರೀತಿಯ ಸಹಾಯವನ್ನು ಕೊಟ್ಟಿತು. 'ಕೂಲಿಗಾಗಿ ಕಾಳು' (ಎಸ್ ಆರ್. ಇ. ಪಿ) ಕಾರ್ಯಕ್ರಮಕ್ಕೆ ಎಡರಂಗ ಸರ್ಕಾರವು ರಾಜ್ಯದ ಸಂಪನ್ಮೂಲದಿಂದಲೇ ಹಣ ಕೊಡಬೇಕಾಯಿತು. ಎನ್. ಆರ್. ಇ. ಪಿ ಎಸ್. ಆರ್. ಇ. ಪಿ, ಐ. ಆರ್. ಡಿ. ಪಿ. ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ತ್ರಿಪುರಕ್ಕೆ ಕೊಡ ಮಾಡಿದ ಹಣವು ಅಗತ್ಯಕ್ಕಿಂತ ತೀರಾ ಕಡಿಮೆ ಯಾಗಿದ್ದಿಂು. ಹೀಗಾಗಿ ಎಡರಂಗ ಸರ್ಕಾರವು ರಾಜ್ಯದ ಸೀಮಿತವಾದ ಸಂಪನ್ಮೂಲನದಿಂದಲೇ ಇವುಗಳಿಗೆಲ್ಲ ಹಣವನ್ನು ವೆಚ್ಚಮಾಡಬೇಕಾಯಿತು. ಐ, ಆರ್. ಡಿ. ಪಿ. ಹಣದ ಸದುಪಯೋಗದ ಬಗ್ಗೆ ಯೋಜನಾ ಆಯೋಗವು ತ್ರಿಪುರದ ಎಡರಂಗ ಸರ್ಕಾರದ ಸಾಧನೆಯನ್ನು ಮೆಚ್ಚಿಕೊಂಡಿದೆ.

ಸರ್ವಾಧಿಕಾರದ ವಿರುದ್ಧವಾಗಿ, ಅಧಿಕಾರಶಾಹಿಯ ವಿರುದ್ಧವಾಗಿ ತ್ರಿಪುರದ ಎಡರಂಗ ಸರ್ಕಾರವು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಜೊತೆಗೂಡಿ ಭಾರತದ ಸಮಸ್ತ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡಿತು. ಭಾರತ ಸರ್ಕಾರವು ಇಂದಿರಾ ಗಾಂಧಿಯುವರು ಪ್ರಧಾನಿ ಯಾಗಿದ್ದ ಕಾಲದಲ್ಲಿ ಮಾಡಿದ ರಾಷ್ಟ್ರೀಯ ಭದ್ರತಾ ಶಾಸನವನ್ನು ತ್ರಿಪುರ ಎಡರಂಗ ಸರ್ಕಾರವು ಖಂಡ ತುಂಡವಾಗಿ ವಿರೋಧಿಸಿದುದಲ್ಲದೆ ಅದನ್ನು ತ್ರಿಪುರ ದಲ್ಲಿ ಉಪಯೋಗಿಸಲಿಲ್ಲ. ಭಾರತ ಸರ್ಕಾರವು 1981ರ ಜೂನ್ ತಿಂಗಳಲ್ಲಿ 'ಅಗತ್ಯ ಸೇವಾ ನಿರ್ವಹಣ ಸುಗ್ರೀವಾಜ್ಞೆ'ಯನ್ನು ಹೊರಡಿಸಿದುದನ್ನು ವಿರೋಧಿಸಲು ಎಡರಂಗವು ತ್ರಿಪುರ ಬಂದ್ ನಡೆಸಿತು. ಈ ಸರ್ಕಾರವು ಕಾರ್ಮಿಕರ ಮತ್ತು ನೌಕರರ ಕಾರ್ಮಿಕ ಸಂಘ ಹಕ್ಕುಗಳನ್ನು, ಪ್ರಜಾ ತಾಂತ್ರಿಕ ಹಕ್ಕುಗಳನ್ನು ಎತ್ತಿಹಿಡಿದು ವಿಸ್ತರಿಸಿತು. ತ್ರಿಪುರದ ರಾಜ್ಯ ಸರ್ಕಾರಿ ನೌಕರರಿಗೆ, ಶಾಲಾ ಶಿಕ್ಷಕರಿಗೆ ಮುಷ್ಕರ ಮಾಡುವ ಹಕ್ಕೂ ಸೇರಿ ದಂತೆ ಎಲ್ಲ ಕಾರ್ಮಿಕ ಸಂಘ ಹಕ್ಕುಗಳನ್ನೂ ಕೊಟ್ಟಿತು. ತ್ರಿಪುರದ ಎಡರಂಗ

ಸರ್ಕಾರದ ಆಡಳಿತದ ಬಗ್ಗೆ ಈಶಾನ್ಯ ಭಾರತದ ಎಲ್ಲಾ ಬುಡಕಟ್ಟುಗಳಿಗೆ ಸೇರಿದ ಗಿರಿಜನರಿಗೆ ಸಮಾಧಾನವಿದ್ದಿತು ಎಂಬುದು ವಿಶೇಷ ಸಂಗತಿ.

ತ್ರಿಪುರ ಎಡರಂಗ ಸರ್ಕಾರದ ಸಾಧನೆಗಳನ್ನು ವಿವರಿಸಲು ಹೋದರೆ ಈ ಲೇಖನದ ಉದ್ದ ಬಹಳವಾಗಿ ಬೆಳೆದೀತು ಆದ್ದರಿಂದ ತ್ರಿಪುರ ಎಡರಂಗ ಸರ್ಕಾರದ ಸಾಧನೆಗಳ ಬಗ್ಗೆ ಒಂದೆರಡು ವಿಷಯಗಳನ್ನು ತಿಳಿಯಬೇಕು. ಭಾರತದ ಸಂವಿಧಾನವು ಹೆಚ್ಚಿನ ಅಧಿಕಾರವನ್ನು ನವದೆಹಲಿಯಲ್ಲೇ ಕೇಂದ್ರೀಕರಿಸಿದ್ದು ರಾಜ್ಯ ಸರ್ಕಾರಗಳಿಗೆ ಇರುವ ಅಧಿಕಾರ ಬಹಳ ಸೀಮಿತವಾಗಿದೆ. ತೆರಿಗೆಗಳ ಮೂಲಕ, ಅಬ್ಕಾರಿ ಸುಂಕದ ಮೂಲಕ ಜನರಿಂದ ಹಣವನ್ನು ಶೇಖರಿಸುವ ಅಧಿಕಾರದಲ್ಲಿ ಮುಕ್ಕಾಲು ಮೂರು ವೀಸಪಾಲು ಕೇಂದ್ರ ಸರ್ಕಾರಕ್ಕೇ ಇದೆ. ಆದರೆ ಜನರ ಕಲ್ಯಾಣಕ್ಕೋಸ್ಕರ ಶಾಲೆ ಆಸ್ಪತ್ರೆಗಳನ್ನು ಕಟ್ಟುವುದು, ಸೇತುವೆ ಅಣೆಕಟ್ಟೆಗಳನ್ನು ಕಟ್ಟುವುದು, ಜನರಿಗೆ ಇತರ ಪರಿಹಾರಗಳನ್ನು ಕೊಡುವುದು ಮುಂತಾದುವುಗಳಿಗೆಲ್ಲಾ ಹಣ ಖರ್ಚು ಮಾಡಬೇಕಾದುದು ರಾಜ್ಯ ಸರ್ಕಾರ. ಹೀಗಾಗಿ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಕೇಂದ್ರ ಸರ್ಕಾರದ ಕೃಪಾ ಕಟಾಕ್ಷವನ್ನು ಅವಲಂಬಿಸಿರುತ್ತದೆ. ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ಹಿರಿಯ ಬಂಡವಾಳಗಾರ-ಜಮೀನ್ದಾರರ ಕಾಂಗ್ರೆಸ್ ಪಕ್ಷಕ್ಕೂ ತ್ರಿಪುರದ ಎಡರಂಗದ ನೇತೃತ್ವವನ್ನು ವಹಿಸಿರುವ ಸಿ.ಪಿ.ಐ.(ಎಂ)ಗೂ ಜನರ ಹಿತಕ್ಕೆ ಸಂಬಂಧಿಸಿದ, ದೇಶದ ಐಕ್ಯತೆ ಸಮಗ್ರತೆಗಳ ರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲಿ-ಎಣ್ಣೆ-ಸೀಗೆಕಾಯಿ ಸಂಬಂಧ. ತ್ರಿಪುರಕ್ಕೆ ಅಗತ್ಯವಾದ ಹಣವನ್ನು ಕೇಂದ್ರ ಸರ್ಕಾರ ಕೊಡಲೇ ಇಲ್ಲ. ಕೇಂದ್ರವು ತ್ರಿಪುರದಲ್ಲಿ ಯಾವ ಕೈಗಾರಿಕೆಯನ್ನು ಸ್ಥಾಪಿಸಲಿಲ್ಲ. ಭಯೋತ್ಪಾದಕರನ್ನು ವಿಧ್ವಂಸಕರನ್ನು ಅಡಗಿಸಲು ಅಗತ್ಯವಾಗಿ ಬೇಕಿದ್ದ ಸಶಸ್ತ್ರ ಪಡೆಗಳನ್ನೂ ಭಾರತ ಸರ್ಕಾರವು ತ್ರಿಪುರದ ಎಡರಂಗ ಸರ್ಕಾರಕ್ಕೆ ಒದಗಿಸಲಿಲ್ಲ. ಈ ಎಲ್ಲಾ ಇತಿಮಿತಿಗಳ, ಅಡೆ ತಡೆಗಳನ್ನು ಗಮನದಲ್ಲಿಟ್ಟುಕೊಂಡು ತ್ರಿಪುರದ ಎಡರಂಗ ಸರ್ಕಾರದ ಸಾಧನೆಗಳನ್ನು ಪರಿಶೀಲಿಸಿದ್ದೇ ಆದರೆ ಸಾಧನೆಗಳ ಮಹತ್ವದ ಅರಿವಾಗುವುದು, ಅಂದಾಜಾಗುವುದು.

ರಾಜೀವ ಗಾಂಧಿಯವರು ಭಾರತದ ಪ್ರಧಾನಿಯಾದ ನಂತರ ನಡೆದ ಅಸ್ಸಾಂ, ಪಂಜಾಬ್, ಮಿಜೋರಾಂ, ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ ಆಂಧ್ರ ಪ್ರದೇಶ ಮತ್ತು ಹರಿಯಾಣ ವಿಧಾನ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸೋತು ಹೋಯಿತು. ಲೋಕ ಸಭೆಗೆ ಮತ್ತು ವಿಧಾನ ಸಭೆಗಳಿಗೆ ನಡೆದ ಉಪಚುನಾವಣೆಗಳಲ್ಲಿಯೂ ಸಹ ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವು ಪರಾಭವ ಗೊಂಡಿತು. 1987ರಲ್ಲಿ ಪ್ರಧಾನಿಯ ನಿಕಟ ವರ್ತಿಗಳ ಮೇಲೆ ಪಶ್ಚಿಮ ಜರ್ಮನಿಯಿಂದ ಜಲಾಂತರ್ಗಾಮಿಗಳನ್ನು ಕೊಳ್ಳು ವುದರಲ್ಲಿ, ಸ್ವೀಡನ್ನಿನ ಭೋಫೋರ್ಸ್‌ನ ಸಂಸ್ಥೆಗಳಿಂದ ಹೋವಿಟ್ಜರ್ ಫಿರಂಗಿ ಗಳನ್ನು ಕೊಳ್ಳುವುದರಲ್ಲಿ ಬೃಹತ್ ಪ್ರಮಾಣದ ಭ್ರಷ್ಟಾಚಾರದ ಪ್ರಕರಣಗಳು ಹೊರಬಂದವು. ವಿ. ಪಿ. ಸಿಂಗ್, ಆರೀಫ್ ಮಹಮ್ಮದ್ ಖಾನ್, ರಾಮ್ ಧನ್, ಅರುಣ್‌ನೆಹರು, ವಿ.ಸಿ. ಶುಕ್ಲಾ ಮುಂತಾದ ಕಾಂಗ್ರೆಸ್ ಮುಖಂಡರು ರಾಜೀವ್ ಗಾಂಧಿಯವರ ಮೇಲೆ ತಿರುಗಿ ಬಿದ್ದರು. ವಿಶ್ವಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆದೇಶಗಳಿಗೆ ಅನುಗುಣವಾಗಿ ನವ ತಂತ್ರಜ್ಞಾನ, ಅತ್ಯಾಧುನಿಕ ಗಣಕಗಳ ವಿಚಾರ ಹೀನ ಬಳಕೆ, ಆರ್ಥಿಕ ಸ್ವಾವಲಂಬನೆಗೆ ಪೆಟ್ಟಾಗುವ, ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹೆಚ್ಚಾಗುವ ನವ ಆರ್ಥಿಕ, ಹೊಸ ಜವಳಿ ಧೋರಣೆಗಳಿಂದಾಗಿ ರಾಜೀವ್ ಗಾಂಧಿಯವರ ಸರ್ಕಾರದ ಮೇಲೆ ದೇಶದ ಜನಸಾಮಾನ್ಯರ ಅತೃಪ್ತಿಯು ಬೆಳೆ ಯುತ್ತಾ ಹೋಯಿತು 1976ರ ನವೆಂಬರ್‌ನಲ್ಲಿ ಭಾರತದ ಮೂಲೆ ಮೂಲೆ ಗಳಿಂದ ಪ್ರಾರಂಭವಾದ ಮಜ್ದೂರ್-ಕಿಸಾನ್ ಜಾಥಾಗಳು ಜನ ಸಾಮಾನ್ಯರ ಬೇಡಿಕೆಗಳಿಗಾಗಿ ಮತ್ತು ರಾಜೀವ್ ಗಾಂಧಿಯವರ ರಾಜೀನಾಮೆಗಾಗಿ ಸಹಸ್ರಾರು ಸಭೆಗಳನ್ನು ನಡೆಸಿ ಡಿಸೆಂಬರ್ 9 ರಂದು ಎಡಪಕ್ಷಗಳ ನೇತೃತ್ವ ದಲ್ಲಿ ನವ ದೆಹಲಿಯಲ್ಲಿ 10 ಲಕ್ಷ ಜನರ ಬೃಹತ್ ಪ್ರದರ್ಶನ ನಡೆಯಿತು. ದೇಶಾದ್ಯಂತ ಕಾರ್ಮಿಕ, ನೌಕರರ, ರೈತ-ಕೂಲಿಕಾರರ, ವಿದ್ಯಾರ್ಥಿ-ಯುವ ಜನತ ವಿವಿಧ ವೃತ್ತಿಗಳವರ ಆಂದೋಳನಗಳು ನಡೆದವು.

ಈ ಪರಿಸ್ಥಿತಿಯಲ್ಲಿ ರಾಜೀವ್ ಗಾಂಧಿಯವರ ಕಾಂಗ್ರೆಸ್ ಪಕ್ಷವು ಹೇಗಾದರೂ ಮಾಡಿ, ಏನಾದರೂ ಮಾಡಿ ತ್ರಿಪುರದಲ್ಲಿ ಸಿ.ಪಿ.ಐ.(ಎಂ)

ನೇತೃತ್ವದ ಎಡರಂಗದಿಂದ ಅಧಿಕಾರವನ್ನು ಕಳೆದು ಕೊಳ್ಳುವ ಸಂಚು ಮಾಡಿತು. ಪ್ರಜಾಪ್ರಭುತ್ವವನ್ನು ಬುಡ ಮೇಲು ಮಾಡುವ ಹೀನ ಕೃತ್ಯಕ್ಕೆ ಕೈಹಾಕಿತು. ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ತ್ರಿಪುರ ವಿಧಾನ ಸಭಾ ಚುನಾವಣೆಯನ್ನು ಡಿಸೆಂಬರ್ ಕೊನೆಯವಾರದಲ್ಲಿ ಸಾಧ್ಯವಾದರೆ 27 ರಂದು ನಡೆಸಬೇಕೆಂದು ಕೇಳಿದಾಗ ಮುಖ್ಯ ಚುನಾವಣಾ ಕಮೀಷನರ್ ಆರ್. ವಿ. ಎಸ್. ಪೆರಿಶಾಸ್ತ್ರಿ ಸಮ್ಮತಿಸಿದರು. ಆದರೆ ತ್ರಿಪುರದಲ್ಲಿ ಕಾಂಗ್ರೆಸ್ ಪಕ್ಷವು ಹಲವು ಗುಂಪುಗಳಾಗಿದ್ದು ಚುನಾವಣೆಯನ್ನು ಎದುರಿಸಲು ಸಿದ್ಧವಿರಲಿಲ್ಲ. ಆ ಪಕ್ಷವು ತ್ರಿಪುರದಲ್ಲಿ ನೃಪೇನ್ ಚಕ್ರವರ್ತಿಯವರ ಸರ್ಕಾರವನ್ನು ವಜಾ ಮಾಡಿ ಒಂದು ವರ್ಷದ ವರೆಗೆ ರಾಷ್ಟ್ರಾಧ್ಯಕರ ಆಡಳಿತವನ್ನು ಹೇರಬೇಕೆಂದೂ, ಅದೂ ಸಾಧ್ಯವಾಗದಿದ್ದಲ್ಲಿ ವಿಧಾನಸಭೆಯ ಅವಧಿಯನ್ನು ಇನ್ನೊಂದು ವರ್ಷಕಾಲ ವಿಸ್ತರಿಸಬೇಕೆಂದೂ ಕೇಳುತ್ತಾ ಬಂದಿದ್ದಿತು. ಮುಖ್ಯ ಚುನಾವಣಾ ಕಮಿಷನರ್ ಷಿಲ್ಲಾಂಗಿಗೆ ಹೋಗಿ ಮೇಘಾಲಯದ ಮಂತ್ರಿ ಮಂಡಲವು ಮೇಘಾಲಯದ ವಿಧಾನ ಸಭಾ ಚುನಾವಣೆಯನ್ನು ತ್ರಿಪುರದ ವಿಧಾನ ಸಭಾ ಚುನಾವಣಾ ನಡೆಯುವಾಗಲೇ ನಡೆಸಲು ಒಪ್ಪಿಗೆಯನ್ನು ಪಡೆದರು. ಅಂದಿನಿಂದ ತ್ರಿಪುರದ ಚುನಾವಣೆಗಳಿಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಕಮಿಷನರ್ ಸ್ವತಂತ್ರವಾಗಿ ವರ್ತಿಸದೆ ಪಕ್ಷಪಾತದಿಂದ ವರ್ತಿಸುತ್ತಾ ಬಂದರು. ರಾಜೀವ್ ಗಾಂಧಿಯವರು ತ್ರಿಪುರದಲ್ಲಿ ಮುಕ್ತವಾದ ಚುನಾವಣೆ ನಡೆಯದಂ ಮಾಡಲು ತಮ್ಮ ಸಚಿವ ಸಂಪುಟದ ಸದಸ್ಯರಾದ ಸಂತೋಷ್ ಮೋಹನ್ ದೇವ್, ಪಿ ಚಿದಂಬರಂ, ಚಿಂತಾಮಣಿ ಪಾಣಿಗ್ರಾಹಿ, ಜನಾರ್ಧನ ಪೂಜಾರಿ, ಅಜಿತ್ ಪಂಜಾ, ರಮಾನಂದ ಮಾದವ್ ಪ್ರಿಯರಂಜನ್ ದಾಸ್‌ಮುನ್ಷಿ ಮೊದಲಾದವರನ್ನು ನಿಯೋಜಿಸಿದರು. ಈ ಮಹನೀಯರ ಪೈಕಿ ಸಂತೋಷಿ ಮೋಹನ್ ದೇವ್ ರನ್ನು ಕಾಂಗ್ರೆಸ್ (ಐ) ವೀಕ್ಷಕರು ಎಂದು ನೇಮಿಸಿದರು. ಚುನಾವಣಾ ನಡವಳಿಕೆ ನಿಯಮಾವಳಿ ಗಳನ್ನೆಲ್ಲಾ ಗಾಳಿಗೆ ತೂರಿ ಈ ಮಂತ್ರಿವರ್ಯರು ತಮ್ಮ ಅಧಿಕೃತ ಕೆಲಸಗಳನ್ನು ಕಾಂಗ್ರೆಸ್(ಐ) ಪರವಾಗಿ ಪ್ರಚಾರ ಮಾಡುವ ಕೆಲಸವನ್ನೂ ಜೊತೆಗೂಡಿಸಿ, ಜೋಡಿಸಿ ರಾಜ್ಯ ಸರ್ಕಾರದ ದೈನಂದಿನ ಕೆಲಸದಲ್ಲಿ ಕಾಂಗ್ರೆಸ್(ಐ)ಪರವಾಗಿ ಮಧ್ಯ ಪ್ರವೇಶ ಮಾಡಿದರು. ಸಂತೋಷಿ ಮೋಹನ್ ದೇವ್ ರು ಸರ್ಕಾರದ

ವೆಚ್ಚದಲ್ಲಿ ತ್ರಿಪುರ ರಾಜ್ಯದೊಳಗಿರುವ ಕಾಂಗ್ರೆಸ್(ಐ)ಪಕ್ಷದ ಎಲ್ಲ ಕಛೇರಿಗಳಿಗೆ ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಟಿ ಸಂಪರ್ಕವನ್ನು ಏರ್ಪಡಿಸಿದರು. ದೇವ್ ರವರು ಅರ್ಥ ಸಚಿವರೇನಲ್ಲ ಆದರೂ ಸಹ ಚುನಾವಣಾ ಪ್ರಚಾರದ ನಡುವೆ ಸಾಲಮೇಳವನ್ನು ನಡೆಸಲು ರಾಜ್ಯ ಸರ್ಕಾರ ಮತ್ತು ಪೋಲಿಸ್ ಸಹಕರಿಸದಿದ್ದಲ್ಲಿ ತಾವೇ ಕಾಂಗ್ರೆ ಸ್ವಯಂ ಸೇವಕರ ಸಹಾಯದಿಂದ 'ಅಗರ್ತಲ' ದ ಸರ್ಕಿಟ್ ಹೌಸಿನಲ್ಲಿ ಸಾಲ ಮೇಳವನ್ನು ನಡೆಸುವುದಾಗಿ ಘೋಷಿಸಿದರು. ಸಾಲ ಮೇಳ ನಡೆದಾಗ ಆದ ಹೊಡೆದಾಟದಲ್ಲಿ ಎಂಟು ಬಡ ಜನರು ಅಸು ನೀಗಿದರು. ದೇವ್ ರವರು ತಮ್ಮ ಒಂದು ಭಾಷಣದಲ್ಲಿ ರಕ್ಷಣೆಗಾಗಿ ರಾಜ್ಯದ ಪೋಲಿಸರನ್ನು ಅವಲಂಬಿಸಕೂಡದೆಂದು ಕಾಂಗ್ರೆ ಸ್ವಯಂ ಸೇವಕರಿಗೆ ಹೇಳಿ ತಾನು ಗಾಂಧಿವಾದಿಯಲ್ಲವೆಂದು ಬಹಿರಂಗವಾಗಿ ಘೋಷಿಸಿದರು.

ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ 'ಸಾದರ್' ಕ್ಷೇತ್ರದ ಚುನಾವಣಾ ಅಧಿಕಾರಿಯವರು ಸರ್ಕಾರಿ ನೌಕರರ ಅಂಚೆ ಮತಚೀಟಿಗಳನ್ನು ಸ್ವೀಕರಿಸುತ್ತಿದ್ದಾಗ ದೇವ್‌ರವರು ಸುಧೀರ್ ರಂಜನ್ ಮಜುಂದಾರ್, ಸಮಿರ್ ರಂಜನ್ ಬರ್ಮನ್ ಮತ್ತು ಇತರ ಕಾಂಗ್ರೆ ಮುಖಂಡರೂ ಸೇರಿದಂತೆ ನೂರಾರು ಕಾಂಗ್ರೆ ಸ್ವಯಂ ಸೇವಕರನ್ನು ಆ ಕಛೇರಿಗಳಿಗೆ ಕಳಿಸಿದರು. ಹೋದವರು ಚುನಾವಣಾ ಅಧಿಕಾರಿಯು ಮತಚೀಟಿಗಳ ಮೇಲೆ ಸಿ.ಪಿ.ಐ.(ಎಂ) ಚುನಾವಣೆಯ ಗುರುತಿನ ಮೇಲೆ ಮುದ್ರೆಯನ್ನು ಒತ್ತುತ್ತಿರುವುದಾಗಿ ಹುಯ್ಲೆಬ್ಬಿಸಿದರು. ಈ ಸುದ್ಧಿಯು ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರಸಾರವಾಯಿತು. ತಕ್ಷಣವೇ ಚುನಾವಣಾ ಆಯೋಗವು ತನಿಖೆಯನ್ನು ನಡೆಸಿ ಇದು ಸುಳ್ಳೆಂದು ಪ್ರಕಟಿಸಿತು. ಆದರೂ ಸಹ ಶ್ರೀ ದೇವ್‌ರವರ ಒತ್ತಾಯದ ಮೇರೆಗೆ ಮತದಾನದ ಮುನ್ನ ಈ ಅಧಿಕಾರಿಯನ್ನು ಬದಲಿಸಿ ತಮಗೆ ಬೇಕಾದ ಒಬ್ಬ ಅಧಿಕಾರಿಯನ್ನು ಹೊರಗಿನಿಂದ ತಂದು ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಯಿತು.

ಸಂತೋಷ್ ಮೋಹನ್ ದೇವ್ ತಮ್ಮ ಕುಖ್ಯಾತ ಸಮಾಜ ವಿರೋಧಿ ಹಿಂಬಾಲಕರೊಂದಿಗೆ ತ್ರಿಪುರದಲ್ಲಿ ನಿಂತು ವಿಧಾನಸಭಾ ಚುನಾವಣೆಯ ಪ್ರಕ್ರಿಯೆಯ ಮೊದಲಿನಿಂದ ಕೊನೆಯವರೆಗೆ ಎಂದರೆ ಮತಗಳನ್ನು ಎಣಿಸಿ ಫಲಿತಾಂಶವನ್ನು ಪ್ರಕಟಿಸುವವರೆಗೆ ಕಾನೂನುಬಾಹಿರವಾಗಿ ಮಧ್ಯಪ್ರವೇಶಿಸಿದರು.

ಭಾರತ ಸರ್ಕಾರದ ಗೃಹಖಾತೆಯ ರಾಜ್ಯ ಸಚಿವ ಪಿ ಚಿದಂಬರಂ ಅವರ ಪಾತ್ರ ತೀರ ಹೇಯವಾದುದು. ಟಿ.ಎನ್.ವಿ. ಹಿಂಸಾಚಾರವನ್ನು ಎದುರಿಸಲು ರಾಜ್ಯ ಸರ್ಕಾರಕ್ಕೆ ಸಹಾಯ ಮಾಡುವುದಾಗಿ 1987ರ ನವೆಂಬರ್ 7 ಮತ್ತು 8ರಂದು ಜಿಲ್ಲೆಗಳನ್ನು ಸಂದರ್ಶಿಸಿದರು ದಕ್ಷಿಣ ತ್ರಿಪುರಾ ಜಿಲ್ಲೆಯಲ್ಲಿ ಉನ್ನತ ಪೋಲೀಸ್ ಅಧಿಕಾರಿಗಳನ್ನು ಬಹಿರಂಗವಾಗಿ ದೂಷಿಸಿ, ತ್ರಿಪುರ ಸ್ಟೇಟ್ ರೈಫಲ್ಸ್ (ಟಿ.ಎಸ್.ಆರ್)ನ ತುಂಬಾ ಸಿ.ಪಿ.ಐ.(ಎಂ) ಕಾರ್ಯಕರ್ತರು ತುಂಬಿ ಹೋಗಿದ್ದಾರೆಂದು. ಆದುದರಿಂದ ಆ ದಳವನ್ನು ಅಲ್ಲಿಂದ ವರ್ಗಾಯಿಸಬೇಕೆಂದೂ ಆಜ್ಞಾಪಿಸಿದರು. ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಅವರು ಚಿಂತಾಮಣಿ ಪಾಣಿ ಗ್ರಾಹಿಯವರ ಜೊತೆಗೂಡಿ ಊರಿಂದ ಊರಿಗೆ ಹೋಗಿ ಚುನಾವಣೆಯಲ್ಲಿ ಕಾಂಗ್ರೆಯನ್ನು ಗೆಲ್ಲಿಸಲು ಸಹಾಯ ಮಾಡಬೇಕೆಂದು ಸಿ.ಆರ್.ಪಿ., ಬಿ.ಎಸ್.ಎಫ್., ಮೊದಲಾದ ಕೇಂದ್ರ ಸರ್ಕಾರದ ಸಶಸ್ತ್ರದಳಗಳ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಟಿ.ಎನ್.ವಿ. ಉಗ್ರಗ್ರಾಮಿಗಳ ಉಪಟಳವನ್ನು ಎಡರಂಗ ಸರ್ಕಾರವು ಕೇಂದ್ರದ ಸಹಾಯವಿಲ್ಲದೇ ಏಕಾಂಗಿಯಾಗಿ ಎದುರಿಸುತ್ತಿದ್ದಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರ ಪಕ್ಷವು ಟಿ.ಯು.ಜೆ.ಎಸ್. ನೊಂದಿಗೆ ಮೈತ್ರಿ ಮಾಡಿ ಕೊಂಡಿದ್ದಿತು. ಟಿ.ಯು ಜೆ.ಎಸ್.ನವರು ಟಿ.ಎನ್.ವಿ.ಗೆ ತೀರಾ ಹತ್ತಿರದವರು. ಇಂದಿರಾ ಗಾಂಧಿಯವರ ಕಾಲದಿಂದಲೂ ತ್ರಿಪುರದ ಗಿರಿಜನರು ವಾಸ ಮಾಡುವ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಸಿ.ಪಿ ಐ.(ಎಂ) ಪ್ರಭಾವವನ್ನು ತಡೆಯಲು ಕಾಂಗ್ರೆಗೆ ಟಿ.ಯು.ಜೆ.ಎಸ್. ಮತ್ತು ಟಿ.ಎನ್.ವಿ. ಬಹಳ ಸಹಾಯ ಮಾಡುತ್ತಾ ಬಂದಿದ್ದವು. ಟಿ.ಎನ್.ವಿ. ಉಗ್ರಗಾಮಿಗಳ ಮುಖ್ಯ ಠಾಣೆಯು ತ್ರಿಪುರ–ಬಾಂಗ್ಲಾ ದೇಶಗಳ ಗಡಿಯ ಆಚೆ ಬಾಂಗ್ಲಾ ದೇಶದಲ್ಲಿ ಇದ್ದಿತು. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತ್ರಿಪುರ ಮತ್ತು ಬಾಂಗ್ಲಾ ದೇಶಗಳ ನಡುವಣ ಗಡಿಯನ್ನು ಸೀಲ್ ಮಾಡಬೇಕೆಂದೂ, ಉತ್ತಮವಾದ ರಸ್ತೆಗಳನ್ನು ನಿರ್ಮಿಸಬೇಕೆಂದೂ, ಬಿ.ಎಸ್.ಎಫ್.ನ ಬಲವನ್ನು ಹೆಚ್ಚಿಸಿ ಟಿ.ಎನ್.ವಿ

ಉಗ್ರಗಾಮಿಗಳು ಸುಲಭವಾಗಿ ತ್ರಿಪುರದೊಳಗೆ ಪ್ರವೇಶಿಸುವುದನ್ನು ತಡೆಯಬೇಕೆಂದೂ ಕೇಂದ್ರ ಸರ್ಕಾರವನ್ನು ಕೇಳುತ್ತಾ ಬಂದಿತು. ಕೇಂದ್ರ ಸರ್ಕಾರವು ಈ ದಿಸೆಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಭಾರತ ಮತ್ತು ಬಾಂಗ್ಲಾ ದೇಶ 'ಸಾರ್ಕ್'ನ ಸದಸ್ಯ ರಾಷ್ಟ್ರಗಳು, ಸಾರ್ಕ್‌ನ ಕಾರ್ಯದರ್ಶಿ ಮಂಡಳಿ ಸಭೆ ಸೇರುವಾಗ ಭಾರತದ ಪ್ರತಿನಿಧಿ ಬಾಂಗ್ಲಾ ದೇಶದ ಪ್ರತಿನಿಧಿಯೊಂದಿಗೆ ಈ ವಿಷಯವಾಗಿ ಮಾತನಾಡದಿದ್ದರೆ ಈ ಸಮಸ್ಯೆ ಪರಿಹಾರವಾಗುವ ಸಂಭವ ಇತ್ತು. ಆದರೆ ಅದಾವುದನ್ನು ಮಾಡುವ ಗೊಡವೆಗೆ ರಾಜೀವ್ ಗಾಂಧಿ ಸರ್ಕಾರ ಹೋಗಲಿಲ್ಲ. ಯಾಕೆಂದರೆ ಟಿ.ಎನ್.ವಿ. ಉಗ್ರಗಾಮಿಗಳು ಆಗಾಗ್ಗೆ ತ್ರಿಪುರದ ಮೇಲೆ ಧಾಳಿ ಮಾಡಿ ಕೊಲೆ ಸುಲಿಗೆಯನ್ನು ಮಾಡುವುದು ಬೇಕಾಗಿದ್ದಿತು. ಕೇಂದ್ರ ಸರ್ಕಾರದ ಸಚಿವ ಸಂಪುಟದ ಅಡಿಯಲ್ಲಿ ಇರುವ 'ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್' (ರಾ) ಸಂಸ್ಥೆಯವರು ಟಿ.ಎನ್.ವಿ. ಯವರ ಚಲನ ವಲನಗಳನ್ನು ನಿರ್ದೇಶಿಸುವುದು, 'ರಾ'ದವರೇ ಕೆಲವರು ಟಿ.ಎನ್.ವಿ.ಯವರ ವೇಷವನ್ನು ಧರಿಸಿ ಟಿ.ಎನ್.ವಿ. ಯೊಂದಿಗೆ ಧಾಳಿಗಳಲ್ಲಿ ಭಾಗವಹಿಸುವುದೂ ಕೇಳಿಬಂದಿದೆ. ಹೀಗಿರುವಾಗ ಫೆಬ್ರವರಿ 2 ರಂದು ವಿಧಾನ ಸಭಾ ಚುನಾವಣೆ ನಡೆಯುವ ಮೊದಲಿನ ಕೆಲವು ತಿಂಗಳುಗಳಲ್ಲಿ ಆಗಾಗ್ಗೆ ಟಿ.ಎನ್.ವಿ. ಉಗ್ರಗಾಮಿಗಳು ಧಾಳಿ ಮಾಡುತ್ತಿದ್ದುದು, ಚುನಾವಣೆಯ ನಂತರ ಟಿ.ಎನ್.ವಿ. ಉಗ್ರಗಾಮಿಗಳ ಧಾಳಿ ಸಂಪೂರ್ಣವಾಗಿ ನಿಂತು ಹೋಗಿರುವುದರಲ್ಲಿ ಆಶ್ಚರ್ಯವೇನಿದೆ ?

ರಾಜೀವ್ ಗಾಂಧಿಯವರು ತ್ರಿಪುರ ವಿಧಾನಸಭಾ ಚುನಾವಣೆಯಲ್ಲಿ ಪ್ರಜಾತಂತ್ರವನ್ನು ಬುಡಮೇಲು ಮಾಡಿ ತಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸವನ್ನು ತನ್ನ ಸಹೋದ್ಯೋಗಿಗಳಿಗೆ ಬಿಟ್ಟು ತಾವು ನವದೆಹಲಿಯಲ್ಲಿ ಸುಮ್ಮನೆ ಕೂಡಲಿಲ್ಲ. ಅವರು ತ್ರಿಪುರಾಕ್ಕೆ ಎರಡು ಭಾರಿ ಭೇಟಿ ಕೊಟ್ಟರು. ನವೆಂಬರ್ 28ರಂದು ಮೊದಲ ವಿರುದ್ಧವಾಗಿ ಸುಳ್ಳಿನ ಕಂತೆಯನ್ನೇ ಬಿಚ್ಚಿದರು. ಅವರ ಪ್ರತಿಯೊಂದು ಸುಳ್ಳಿಗೂ ಎಡರಂಗ ಸರ್ಕಾರವು ಅಂಕಿಅಂಶಗಳ ಸಮೇತ ಉತ್ತರ ಕೊಟ್ಟಿತು. ಅವರು ಎರಡನೆಯ ಬಾರಿ ಮತದಾನ ನಡೆಯುವ ದಿವಸದ ನಾಲ್ಕು ದಿನಗಳ ಮೊದಲು ಜನವರಿ 28, 29 ರಂದು ತ್ರಿಪುರಕ್ಕೆ ಭೇಟಿ

ಕೊಟ್ಟರು. ಅವರ ಭೇಟಿಯ ತಾರೀಖು ಯಾವ ರೀತಿ ನಿರ್ಧಾರವಾಗಿತ್ತೆಂದರೆ ಅವರು ಬಂದಾಗ ರಾಜ್ಯ ಸರ್ಕಾರದ ಎಲ್ಲ ಉನ್ನತ ಅಧಿಕಾರಿಗಳೂ ಪ್ರಧಾನಿಯವರ ಪ್ರವಾಸದ ಕಾರ್ಯಕ್ರಮವನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿರುವಂತೆ ಆಗಿ, ಆ ಸಮಯದಲ್ಲಿ ರಾಜ್ಯ ಸರ್ಕಾರದ ಆಡಳಿತ ಮತ್ತು ಪೋಲೀಸ್ ಯಂತ್ರ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯವಾಗದಂತೆ ಆಯಿತು. ಅಗರ್ತಲದಲ್ಲಿರುವ ರಾಜ್‌ಭವನವು ಅವರ ಕೇಂದ್ರವಾಯಿತು. ಅವರು ಅಲ್ಲಿಂದಲೇ ಕಾಂಗ್ರೆ ಚುನಾವಣಾ ಸಭೆಗಳಿಗೆ ಹೋತ್ತಿದ್ದರು. ಜನವರಿ 28ರಂದು ಅಗರ್ತಲಾದ ರೈಪಲ್ಸ್ ಫರೇಡ್ ಗ್ರೌಂಡಿನಲ್ಲಿ ಭಾಷಣ ಮಾಡುತ್ತಾ ಚುನಾವಣೆ ಮುಗಿದ ಕೂಡಲೇ ಸಾಲಮೇಳಗಳನ್ನು ನಡೆಸುವುದಾಗಿ ಮತದಾರರಿಗೆ ಆಶ್ವಾಸನೆ ಇತ್ತರು. ಆ ಸಭೆಯಲ್ಲಿ ಅವರು ಮಹಾ ಸುಳ್ಳೊಂದನ್ನು ಹೇಳಿದರು· ಟಿ.ಎನ್.ವಿ.ಯು ಸಿ.ಪಿ.ಐ.(ಎಂ)ನ ಶಿಶು. ಈವರೆವಿಗೆ ಟಿ.ಎನ್.ವಿ.ಯು ಮಾಡಿರುವ ಕೊಲೆಗಳಿಗೆಲ್ಲ ಸಿ.ಪಿ ಐಂ.(ಎಂ) ನವರೇ ಕಾರಣ ಎಂದರು. ಆದರೆ ಈಗ ಗೊತ್ತಾಗುತ್ತಿದೆ, ಈ ಕೊಲೆಗಳಿಗೆಲ್ಲ 'ರಾ' ಮೂಲಕ ಕೇಂದ್ರ ಸರ್ಕಾರವೇ ಕಾರಣ ಎಂಬುದು ಪ್ರಧಾನಮಂತ್ರಿ ರಾಜೀವಗಾಂಧಿಯೇ ಕಾರಣರೆಂಬುದು.

ಮರು ದಿವಸ ಜನವರಿ 29 ರ ಬೆಳಿಗ್ಗೆ ಅವರು ಪತ್ರಿಕಾ ಸಮ್ಮೇಳನವೊಂದನ್ನು ಕರೆದು ಟಿ.ಎನ್.ವಿ. ಉಗ್ರಗಾಮಿಗಳನ್ನು ಅಡಗಿಸದಿರುವುದು ಎಡರಂಗ ಸರ್ಕಾರದ ವೈಫಲ್ಯವೆಂದು ದೂರಿದರು. ಟಿ.ಎನ್.ವಿ. ಯನ್ನು ಸದೆಬಡಿಯಲು ಕಠಿಣ ನಿರ್ಧಾರಗಳನ್ನು ಕೈ ಗೊಂಡಿರುವುದಾಗಿ ಅವರು ಹೇಳಿದರು. ಅದೇ ದಿವಸದ ಸಂಜೆ ಇಡೀ ತ್ರಿಪುರಾ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶ ಎಂದು ಘೋಷಿಸಿರುವುದಾಗಿಯೂ ಸೇನೆಯ ತುಕಡಿಗಳು ತ್ರಿಪುರವನ್ನು ಪ್ರವೇಶಿಸಿರುವುದಾಗಿಯೂ ಆಕಾಶವಾಣಿಯು ಪ್ರಸಾರ ಮಾಡಿತು.

ಈ ಸುದ್ದಿಯನ್ನು ಕೇಳಿ ಎಡರಂಗ ಸರ್ಕಾರಕ್ಕೆ ಅಚ್ಚರಿ ಉಂಟಾಯಿತು. ಸ್ವಲ್ಪಕಾಲದ ಹಿಂದೆ 1987 ರ ಸೆಪ್ಟಂಬರ್ 12 ರಂದುಭಾರತ ಸರ್ಕಾರದ ಗೃಹ ಸಚಿವ ಬೂಟಾ ಸಿಂಗರು ತ್ರಿಪುರಕ್ಕೆ ಭೇಟಿ ಇತ್ತಾಗ ಟಿ.ಎನ್.ವಿ. ದೇಶದ್ರೋಹಿಗಳನ್ನು ಸದೆ ಬಡಿಯಲು ತೆಗೆದು ಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ತಮಗೂ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರಿಗೂ ಯಾವುದೇ

ಭಿನ್ನಾಭಿಪ್ರಾಯವಿಲ್ಲವೆಂದು ಹೇಳಿದರು. ಬಾಂಗ್ಲಾ ದೇಶ–ತ್ರಿಪುರ ಗಡಿಯಿಂದ 15 ಕಿ.ಮೀ ದೂರವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಲು ಅವರಿಬ್ಬರೂ ಒಪ್ಪಿದರು. ಸೇನೆಯ ಬ್ರಿಗೇಡಿಯರ್ ಶರ್ಮರವರು(ಈಗ ಅವರೂ ಭೂಸೇನೆಯ ಮುಖ್ಯ ದಂಡನಾಯಕರಾಗಿದ್ದಾರೆ) ಆಗಿನ ಮುಖ್ಯಮಂತ್ರಿಯವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ಮತದಾನ ಮುಗಿದ ಕೂಡಲೇ ಎಲ್ಲೆಲ್ಲಿ ಆಗತ್ಯವಿದೆಯೋ ಅಲ್ಲೆಲ್ಲಾ ಸೇನೆಯನ್ನು ಇರಿಸುವುದಾಗಿ ಹೇಳಿದರು.

ಬೂಟಾ – ಚಕ್ರವರ್ತಿಯವರ ಲಿಖಿತ ಒಪ್ಪಂದವನ್ನು ಗಾಳಿಗೆ ತೂರಿ ಪ್ರಧಾನಮಂತ್ರಿ ರಾಜೀವ ಗಾಂಧಿಯವರು ರಾಜ ಸರ್ಕಾರದ ಅಭಿಪ್ರಾಯಕ್ಕೆ ಬೆಲೆಕೊಡದೆ ನಿರಂಕುಶವಾಗಿ ಇಡೀ ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣ ಕಪಟ ಪ್ರಕ್ರಿಯೆಯನ್ನಾಗಿ ಮಾಡಿದರು. ಇಡೀ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ ಸೇನೆಯ 70 ತುಕಡಿಗಳನ್ನು ಎಲ್ಲೆಡೆಗೆ ಕಳಿಸಿದ ನಂತರ ರಾಜ್ಯ ಸರ್ಕಾರಕ್ಕೆ ಮಾಡಲು ಏನೂ ಉಳಿಯುವುದಿಲ್ಲವೆಂಬುದು ಎಲ್ಲರಿಗೂ ಗೊತ್ತು. ರಾಜ್ಯ ಸರ್ಕಾರವು ಅಪ್ರಸ್ತುತವಾಯಿತು. ಚುನಾವಣಾ ಸಮಯದ ಮೂರು ದಿವಸಗಳಲ್ಲಿ ಮತಕಟ್ಟೆಗಳು ಮತ್ತು ಮತಗಳ ಎಣಿಕೆಯ ಕೇಂದ್ರಗಳಿಗೆ ರಾಜ್ಯ ಸರ್ಕಾರವು ಮಾಡಿದ್ದ ಪೋಲೀಸ್ ಬಂದೋಬಸ್ತ್ ವ್ಯವಸ್ಥೆಗಳನ್ನು ಬದಲಿಸಲಾಯಿತು. ಈ ಕೆಲಸವನ್ನು ಕೇಂದ್ರ ಸರ್ಕಾರದ ಹತೋಟಿಯಲ್ಲಿರುವ ಸಶಸ್ತ್ರಪಡೆಗಳಿಗೆ ಮತ್ತು ಸೇನೆಯ ತುಕಡಿಗಳಿಗೆ ವಹಿಸಿಕೊಡಲಾಯಿತು.

ಚುನಾವಣೆಯಲ್ಲಿ ಮೋಸ :

ಮತದಾನ ನಡೆಯುವ ದಿವಸ ಮತ್ತು ಮತಗಳನ್ನು ಎಣಿಕೆ ಮಾಡುವ ದಿವಸ ಇಡೀ ಚುನಾವಣೆಯಲ್ಲಿ ಯಾವ ರೀತಿ ಮೋಸ ಮಾಡಿದ್ದರು ಎನ್ನುವುದು ತ್ರಿಪುರದ ಜನರಿಗೆ ಅರಿವಾಯಿತು. ಫೆಬ್ರವರಿ 2ರಂದು ಮತದಾನದ ಬಗ್ಗೆ ಅಗರ್ತಲಕ್ಕೆ ಸುದ್ಧಿಗಳು ಬರಲಾರಂಭಿಸಿದಾಗ ಟಿ.ಎನ್.ಪಿ ಉಗ್ರಗಾಮಿಗಳು ಸೃಷ್ಟಿಸಿದ್ದ ಭಯದ ವಾತಾವರಣವನ್ನು ಕಾಂಗ್ರೆಸ್(ಐ)–ಟಿ.ಯು.ಜೆ.ಎಸ್

ಮೈತ್ರಿಯು ಉಪಯೋಗಿಸಿಕೊಂಡಿರುವುದು ತಿಳಿದು ಬಂದಿತು. ಬಿಶಾಲ್‌ಗರ್‌ನಂತಹ ಕ್ಷೇತ್ರಗಳಲ್ಲಿ ಬಹಿರಂಗವಾಗಿ 'ರಿಗ್' ಮಾಡಲಾಯಿತು.

ಆದರೆ ಫೆಬ್ರವರಿ 3ರಂದು ಮತಗಳ ಎಣಿಕೆ ಪ್ರಾರಂಭವಾದಾಗ ನಡೆದುದನ್ನು ಊಹಿಸಲೂ ಸಹ ಸಾಧ್ಯವಿಲ್ಲ. ಸಾದರ್ ಡಿವಿಜನಿನಲ್ಲಿ 18 ಕ್ಷೇತ್ರಗಳ ಮತಗಳ ಎಣಿಕೆ ನಡೆಯುವಾಗ, ಎಣಿಕೆ ನಡೆಯುತ್ತಿದ್ದ ಸಭಾಂಗಣಗಳಿಗೆ ಅನೇಕ ಕಸಬುದಾರಿ ಗೂಂಡಾಗಳು ಪ್ರವೇಶಿಸಿದರು. ಈ ಸಮಾಜ ವಿರೋಧಿ ವ್ಯಕ್ತಿಗಳು ಉಮೇದುವಾರರನ್ನು ಅವರ ಚುನಾವಣಾ ಏಜಂಟರನ್ನು ಮತ್ತು ಕೌಂಟಿಂಗ್ ಏಜಂಟರನ್ನು ಸಣ್ಣ ಪಿಸ್ತೂಲುಗಳನ್ನು ತೋರಿಸಿ ಬೆದರಿಸಿದರು. ತಮ್ಮ ಕ್ಷೇತ್ರಗಳ ಮತಗಳ ಎಣಿಕೆ ಮುಗಿದ ನಂತರ ಸುಧೀರ್ ರಂಜನ್ ಮಜುಂದಾರ್, ಸಮೀರ್ ರಂಜನ್ ಬರ್ಮನ್, ಮೋತೀಲಾಲ್ ಸಹಾ, ಸುರಜಿತ್ ದತ್ತಾರಂತಹ ಕಾಂಗ್ರೆ ಮುಖಂಡರು ಮುಕ್ತವಾಗಿ ಒಂದು ಟೇಬಲ್ಲಿನಿಂದ ಇನ್ನೊಂದು ಟೇಬಲ್ಲಿಗೆ ಓಡಾಡುತ್ತಿದ್ದರು. ಆದ್ದರಿಂದ ಭಯಪೀಡಿತರಾದ ಚುನಾವಣಾಧಿಕಾರಿಗಳು ತಮ್ಮ ಜೀವಗಳಿಗೆ ಹೆದರಿ ಕಾಂಗ್ರೆ ಉಮೇದುವಾರರ ಪರವಾಗಿ ತೀರ್ಪುಗಳನ್ನು ಕೊಡಬೇಕಾಯಿತು. ವಿಶೇಷವೆಂದರೆ ಮಜಲಿಸ್‌ಪುರ್ ಕ್ಷೇತ್ರದಲ್ಲಿ ಪಶ್ಚಿಮ ತ್ರಿಪುರದ ಜಿಲ್ಲಾ ಮ್ಯಾಜಿಸ್ಟ್ರೇಟರೇ ಚುನಾವಣಾ ಅಧಿಕಾರಿ ಆಗಿದ್ದು ಅವರನ್ನು ಕ್ರಿಮಿನಲ್‌ಗಳು ಸುತ್ತುವರಿದು ಕೊಲೆ ಮಾಡುವುದಾಗಿ ಹೆದರಿಸಿದಾಗ ಅವರು ತಾವು ಮೊದಲು ಕೊಟ್ಟಿದ್ದ ತೀರ್ಪನ್ನು ಬದಲಿಸಿ ಕಾಂಗ್ರೆ ಪರವಾಗಿ ತೀರ್ಪು ಕೊಟ್ಟರು. ಸಿ.ಪಿ.ಐ.(ಎಂ) ಉಮೇದುವಾರರು ಗೆದ್ದಿದ್ದಾರೆಂದು ಮೊದಲು ಅವರು ಘೋಷಿಸಿದ್ದರು. ಮತಗಳ ಮರು ಎಣಿಕೆ ಆಗಬೇಕೆಂದು ಕಾಂಗ್ರೆ ಉಮೇದುವಾರರು ಕೊಟ್ಟ ಅರ್ಜಿಯನ್ನು ಅವರು ತಳ್ಳಿ ಹಾಕಿದ್ದರು. ಈ ಚುನಾವಣಾ ಫಲಿತಾಂಶವನ್ನು ಘೋಷಿಸಲು ಅವರು ದೂರ ಸಂಪರ್ಕದ ಮೂಲಕ ಚುನಾವಣಾ ಆಯೋಗದ ಒಪ್ಪಿಗೆಯನ್ನು ಪಡೆದಿದ್ದರು. ಇಷ್ಟೆಲ್ಲಾ ಆಗಿದ್ದರೂ ಸಹ ಚುನಾವಣಾ ಅಧಿಕಾರಿ ತನ್ನ ಜೀವ ಭಯದಿಂದ ಪ್ರತ್ಯಕ್ಷವಾಗಿ ಫಲಿತಾಂಶವನ್ನು 'ರಿಗ್' ಮಾಡಲು ಬಿಡಬೇಕಾಯಿತು.

ಚುನಾವಣೆಯ ನಂತರ

ಬಿದ್ದ ಮತಗಳ ಶೇಕಡಾ 47ರಷ್ಟನ್ನು ಮಾತ್ರ ಪಡೆದ ಕಾಂಗ್ರೆ, ಟಿ.ಯು.ಜೆ.ಎಸ್. ಮೈತ್ರಿಯು ಅಧಿಕಾರದ ಗದ್ದುಗೆಯನ್ನು ಏರಿದ ನಂತರ

ತ್ರಿಪುರದ ಜನತೆಯ ಅಲ್ಪ ಸಂಖ್ಯೆಯ ಬೆಂಬಲ ಮಾತ್ರ ತಮಗಿದ್ದುದು ಎಂಬುದನ್ನು ಕಂಡಿತು. ಇಷ್ಟೆಲ್ಲ ಮೋಸಗ್ಗಾರಿಕೆ ನಡೆದರೂ ಸಹ ಎಡರಂಗ ಮತ್ತು ಸಿ.ಪಿ.ಐ.(ಎಂ) ಜತೆ ಶೇಕಡಾ 50–60 ರಷ್ಟು ಮತದಾರರು ದೃಢವಾಗಿ ನಿಂತರು. ಇದರಿಂದ ಧೃತಿಗೆಟ್ಟ ಮೈತ್ರಿ ಸರ್ಕಾರವು ಜನತೆಯ ಮೇಲೆ ವ್ಯಾಪಕವಾದ ದಬ್ಬಾಳಿಕೆಯನ್ನೇ ಹರಿಬಿಟ್ಟಿತು. ಈವರೆವಿಗೆ ಎಡರಂಗ ಮತ್ತು ಸಿ.ಪಿ.ಐ.(ಎಂ)ಗಳ 12,000 ಕ್ಕಿಂತಲೂ ಹೆಚ್ಚು ಕಾರ್ಯಕರ್ತರ ಮೇಲೆ ಕೊಲೆ ದರೋಡೆ ಮುಂತಾದ ಸುಳ್ಳು ಆಪಾದನೆಗಳ ಕೇಸುಗಳನ್ನು ಹಾಕಿದ್ದಾರೆ. ಸಿ.ಪಿ ಐ.(ಎಂ) ಮತ್ತು ಇತರ ಎಡ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಅನೇಕ ಕಛೇರಿಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲಾಗಿದೆ. ನೂರಾರು ಮನೆಗಳನ್ನು ಲೂಟಿ ಮಾಡಲಾಗಿದೆ. ಪ್ರಾರಂಭದಲ್ಲಿ ನೂರಾರು ಜನರನ್ನು ಬಂಧಿಸಿ, ಪೋಲೀಸ್ ವಶದಲ್ಲಿ ಇರಿಸಿಕೊಂಡು ವಿಪರೀತವಾಗಿ ಹೊಡೆದು ಚಿತ್ರಹಿಂಸೆ ಮಾಡಿ ಅವರಿಂದ ತಪ್ಪು ಒಪ್ಪಿಕೊಳ್ಳುವ ಹೇಳಿಕೆಯನ್ನು ಪಡೆಯಲಾಗಿದೆ. ಸರ್ಕಾರದ ಈ ಭಯೋತ್ಪಾದಕ ಕೃತ್ಯಗಳಿಂದಾಗಿ ನೂರಾರು ಕುಟುಂಬಗಳು ಮನೆಬಿಟ್ಟು ಊರು ಬಿಟ್ಟು ಓಡಿ ಹೋದರು.

ಗಿರಿಜನರ ಪ್ರದೇಶಗಳಲ್ಲಿ ನಡೆದ ದೌರ್ಜನ್ಯವಂತೂ ತೀರಾ ಹೇಯವಾದದ್ದು. ಗಿರಿಜನ–ಗಿರಿಜನೇತರರ ಐಕ್ಯತೆಯ ಕೋಟೆಗಳಾಗಿದ್ದ ಸಿ.ಪಿ.ಐ. (ಎಂ) ನೆಲೆಗಳನ್ನು ನಾಶ ಮಾಡಲು ಸೇನೆಯನ್ನು ಉಪಯೋಗಿಸಲಾಯಿತು. ಸೇನೆಯು ಸಹಸ್ರಾರು ಗಿರಿಜನರನ್ನು ವಾರಂಟಿಲ್ಲದೆ ಬಂಧಿಸಿದೆ, ಗಿರಿಜನರ ಮನೆಗಳನ್ನು ಶೋಧಿಸಿದೆ, ಅಲ್ಲದೆ ಮಹಿಳೆಯರ ಮಾನಭಂಗ ಮಾಡಿದೆ. ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಸೇನೆಯನ್ನು ಕಳುಹಿಸಿದುದು ಟಿ.ಎನ್.ವಿ. ಉಗ್ರಗಾಮಿಗಳ ಮತ್ತು ಅವರ ಸಹಚರರ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲು ಅಲ್ಲ ಎಂಬುದು ಬಯಲಾಯಿತು. ಸಂಸತ್ತಿನಲ್ಲಿ ಅವರೇ ಕೊಟ್ಟ ಹೇಳಿಕೆಯ ಪ್ರಕಾರ ಸೇನೆಗೆ ಇಷ್ಟೆಲ್ಲ ದಿವಸಗಳಲ್ಲಿ ಒಬ್ಬ ಟಿ.ಎನ್.ವಿ. ಉಗ್ರಗಾಮಿಯನ್ನು ಸೆರೆಹಿಡಿಯಲಾಗಲೀ ಅಥವಾ ಕೊಲ್ಲಲಾಗಲೀ ಆಗಲಿಲ್ಲ. ಇದರಿಂದಾಗಿ ತ್ರಿಪುರದ ಮೇಲೆ ಹೇರಿರುವ 'ಗಲಭೆ ಪೀಡಿತ ಪ್ರದೇಶ' ಎಂಬ ಘೋಷಣೆಯನ್ನು ಹಿಂತೆಗೆದುಕೊಳ್ಳಬೇಕೆಂದೂ ಸೇನೆಯನ್ನು ವಾಪಸ್ಸು

ಕರೆಸಿಕೊಳ್ಳಬೇಕೆಂದೂ ಜನರು ಒತ್ತಾಯ ಮಾಡಲಾರಂಭಿಸಿದ್ದಾರೆ. ಎಡರಂಗ ಮತ್ತು ಸಿ.ಪಿ ಐ.(ಎಂ)ನ ಕಾರ್ಯಕರ್ತರನ್ನು ಅಮಾನವೀಯವಾಗಿ ಚಿತ್ರಹಿಂಸೆಗೆ ಗುರಿಪಡಿಸಲಾಗಿದೆ. ತ್ರಿಪುರದ ಹೊಸ ಮಂತ್ರಿ ಮಂಡಳವು ಭಾರತದ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳನ್ನು ತ್ರಿಪುರದ ಜನತೆಗೆ ನಿರಾಕರಿಸಿದೆ. ಈ ಸರ್ಕಾರವು ಸಿ.ಪಿ.ಐ.(ಎಂ)ನ ದಿನ ಪತ್ರಿಕೆ 'ದೇಶೇರ್ ಕಥಾ'ದ ಮೇಲೆ ಧಾಳಿ ಮಾಡಿದೆ. ಈ ಪತ್ರಿಕೆಯನ್ನು ಮಾರಾಟ ಮಾಡುವವರನ್ನು ಹೊಡೆಯಲಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಿಗೆ 'ಪರಿಣಾಮ ನೆಟ್ಟಗಾಗದು' ಎಂದು ಬೆದರಿಸಲಾಗುತ್ತಿದೆ.

ಘತಿಕ್ರಾಯ್ ಕ್ಷೇತ್ರದ ಉಪಚುನಾವಣೆ :

ವಿಧಾನ ಸಭಾ ಚುನಾವಣೆಯ ನಂತರ ಏಪ್ರಿಲ್ 24ರಂದು 'ಘತಿಕ್ರಾಯ್' ವಿಧಾನ ಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಿತು. ಪ್ರಧಾನಮಂತ್ರಿ ರಾಜೀವಗಾಂಧಿ ಮತ್ತು ಅವರ ಪಕ್ಷದವರು ನಮ್ಮ ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಯಾವ ಮಟ್ಟಕ್ಕೆ ಹೋಗಬಹುದು ಎಂಬುದು ಈ ಚುನಾವಣೆಯಲ್ಲಿ ಕಂಡು ಬರುತ್ತದೆ. ಘತಿಕ್ರಾಯ್ ಸಿಪಿಐ(ಎಂ)ಗೆ ಭದ್ರನೆಲೆಯಾಗಿದ್ದ ಒಂದು ವಿಧಾನಸಭಾ ಕ್ಷೇತ್ರವಾಗಿತ್ತು. ಈ ಉಪಚುನಾವಣೆಯಲ್ಲಿ ಬೃಹತ್ ಪ್ರಮಾಣದಲ್ಲಿ ಸಾಮೂಹಿಕವಾಗಿ 'ರಿಗ್' ಮಾಡಿ ಕಾಂಗ್ರೆಸ್, ಟಿಯುಜೆಎಸ್ ಮೈತ್ರಿ ಕೂಟವು ಮಾಡಿದ ದುಷ್ಟ ಪ್ರಯತ್ನಗಳು ಅವರ್ಣನೀಯವಾದುದು. ಮೈತ್ರಿಕೂಟದ 17 ಮಂತ್ರಿಗಳು, ಭೂಸೈನ್ಯ, ಸಶಸ್ತ್ರ ಪಡೆಗಳು-ರಾಜ್ಯ ಪೋಲೀಸ್, ಗೃಹ ರಕ್ಷಕ ದಳಗಳ ಜತೆಗೆ ಇಡೀ ತ್ರಿಪುರ ರಾಜ್ಯದಿಂದ ಕಲೆ ಹಾಕಿದ್ದ, ನೆರೆಯ ಆಸ್ಸಾಂ, ಮಣಿಪುರ, ಪಶ್ಚಿಮ ಬಂಗಾಳ ಮೊದಲಾದ ಕಡೆಗಳಿಂದ ಕರೆದು ತಂದಿದ್ದ ಕಾಂಗ್ರೆ ಸ್ವಯಂ-ಸೇವಕರು ಎಂಬ ಲೇಬಲ್ ಹಚ್ಚಿಕೊಂಡಿದ್ದ ಸಮಾಜ ವಿರೋಧಿಗಳು ಕ್ರಿಮಿನಲ್‌ಗಳು ಈ ಚುನಾವಣೆಯನ್ನು ರಿಗ್ ಮಾಡುವ ಕೆಲಸದಲ್ಲಿ ಭಾಗವಹಿಸಿದ್ದರು.

4 ದಿನಗಳ ನಂತರ ಏಪ್ರಿಲ್ 28ರಂದು ಹೊಸ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ಮುಖಂಡರಾಗಿರುವ ನೃಪೇನ್ ಚಕ್ರವರ್ತಿ ಇವರ ನೇತೃತ್ವ

ದಲ್ಲಿ ಕೆಲವು ಶಾಸಕರು ಫತಿಕ್ರಾಯ್ ಕ್ಷೇತ್ರದ ಮತಗಟ್ಟೆಗಳಿಗೆ ಭೇಟಿಕೊಟ್ಟರು. ಅವರು ಮನಕರಗುವ ದಾರುಣ ದೃಶ್ಯಗಳನ್ನು ಕಂಡರು ಮತ್ತು ಆ ಘಟನೆಗಳ ಕುರಿತು ಕೇಳಿದರು. ಇವರ ಜತೆಯಲ್ಲಿ ಬೈದ್ಯನಾಥ್ ಮಜುಂದಾರ್ ಎಂಎಲ್ಎ, ಪೂರ್ಣ ಮೋಹನ ತ್ರಿಪುರ ಎಂ.ಎಲ್.ಎ, ಕೊಮಿನಿ ದೇಬ್‌ಬರ್ಮಾ, ಟಿ.ಟಿ. ಎ ಎ.ಡಿ.ಸಿ ಯ ಕಾರ್ಯಕಾರಿ ಸಮಿತಿ ಸದಸ್ಯರು ಮತು ಸ್ಥಳೀಯ ಸಿ.ಪಿ.ಐ. (ಎಂ) ಕಾರ್ಯಕರ್ತರು ಇದ್ದರು.

ಈ ಕ್ಷೇತ್ರದ ಒಂದು ಮತಕಟ್ಟೆ ಜಗನ್ನಾಥಪುರದಲ್ಲಿದೆ. ಸಂತದೇವ ಖುಷಿದಾಸ್ ಈ ಸ್ಥಳದ ಮುಖಂಡ ಮತ್ತು ವಯೋವೃದ್ಧ. ಮತದಾನದ ದಿವಸ ಅವರು ಮತ್ತು ಅವರ ಹೆಂಡತಿ ಮತಕಟ್ಟೆಯ ಹತ್ತಿರ ಸಾಲಾಗಿ (ಕ್ಯೂ) ನಿಂತಿದ್ದರು. ಕೆಲವು ನಿಮಿಷಗಳಲ್ಲಿ ಲಾರಿಗಳಲ್ಲಿ, ಜೀಪುಗಳಲ್ಲಿ ನೂರಾರು ಗೂಂಡಾಗಳು ಬಂದು ಪಟಾಕಿಗಳನ್ನು ಮತದಾರರ ಕಡೆ ಎಸೆದರು. ಹನ್ನೊಂದು ಮಂದಿಯ ಕೈಯಲ್ಲಿ ಪಿಸ್ತೂಲುಗಳಿದ್ದವು. ಅವರು ತಮ್ಮ ಪ್ರಾಣ ರಕ್ಷಣೆಗಾಗಿ ಅಲ್ಲಿಂದ ಓಡಬೇಕಾಯಿತು. ಪ್ರಭಾತ್ ಚರಣದಾಸ್ ಎಂಬ ಇನ್ನೊಬ್ಬರು ಗೂಂಡಾಗಳನ್ನು ಕಂಡಕೂಡಲೇ ತಾವು ಓಡಿರುವುದಾಗಿಯೂ ತಮಗೆ ಇನ್ನೂ ಭಯವಿರುವುದಾಗಿಯೂ ಹೇಳಿದರು.

ಬಿಪ್ಲಬ್‌ದಾಸ್ 12 ವರುಷದ ಹುಡುಗ. ಸ್ಥಳೀಯ ಕಾಂಗ್ರೆ ಬೆಂಬಲಿಗರ ಕೋರಿಕೆಯ ಮೇರೆಗೆ ಅವನು ಒಂದು ಚಹ ಅಂಗಡಿಯನ್ನು ಪ್ರಾರಂಭಿಸಿದ್ದ. ಅಂದು ಬೆಳಿಗ್ಗೆ 20-25 ಜನರು ಅವನ ಅಂಗಡಿಯಲ್ಲಿ ಚಾ ಕುಡಿಯುತ್ತಿದ್ದರು. ಅವರ ಪೈಕಿ ಒಬ್ಬರು ಕೆಂಪು ಟೋಪಿಯನ್ನು ಧರಿಸಿದ್ದರು. ಸ್ವಲ್ಪ ಹೊತ್ತಿನಲ್ಲಿ ಯಾರೋ ಏನೋ ಅರಚಿದರು. ಕೆಂಪು ಟೋಪಿಯನ್ನು ಕಿತ್ತು ಕೊಳ್ಳಲಾಯಿತು. ಅವರನ್ನು ಅಲ್ಲಿಯೇ ಚಿತ್ರಹಿಂಸೆ ಮಾಡಲಾಯಿತು. ಕೆಲವೇ ನಿಮಿಷಗಳಲ್ಲಿ ಸಿ.ಪಿ.ಐ.(ಎಂ) ಬೂತ್ ಆಫೀಸನ್ನು ದಾಳಿಮಾಡಿ ನಾಶ ಮಾಡಲಾಯಿತು. ಆ ಹುಡುಗನ ಚಹದಂಗಡಿಯನ್ನು ಸಹ ನಾಶ ಮಾಡಿದರು. ಹುಡುಗನ ತಂದೆಯು ಬಿಟ್ಟು ಹೋಗಿದ್ದ ಶರಟನ್ನು ತೆಗೆದುಕೊಳ್ಳಲಾಗಲಿಲ್ಲ. ಅದರ ಕಿಸೆಯಲ್ಲಿ 174 ರೂ. ಇತ್ತು ಮತ್ತು ಅಂಗಿಯು ಬೆಂಕಿಯಲ್ಲಿ ಸುಟ್ಟು ಹೋಯಿತು.

ಕಮಲ್ ಮಲಾಕಾರ್ ಎಂಬುವರು ತಮ್ಮ ಕೈಯನ್ನು ತೋರಿಸಿ ಅದರ ಮೇಲಿರುವ ಶಾಯಿಯ ಗುರ್ತು ಬಲಾತ್ಕಾರದಿಂದ ಹಾಕಿರುವುದೆಂದು ತನ್ನ ಮತವನ್ನು ಕಾಂಗ್ರೆ ಗೂಂಡಾಗಳೇ ಹಾಕಿದರು ಎಂದು ಹೇಳಿದರು.

ಈ ತಂಡವು ಆಸ್ಸಾಂ ಬಸ್ತಿ ಜೂನಿಯರ್ ಬೇಸಿಕ್ ಸ್ಕೂಲ್ ಮತ ಗಟ್ಟೆಗೆ ಹೋಯಿತು ದೂರದಿಂದ ಇವರ ವಾಹನವನ್ನು ನೋಡಿದ ಹಳ್ಳಿಗರು ಓಡಲಾರಂಭಿಸಿದರು. ಅವರಲ್ಲಿ ಹೆಚ್ಚಿನವರು ಮಣಿಪುರಿಗಳಾಗಿದ್ದರು. ಅವರು ಯಾಕೆ ಓಡುತ್ತಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಅವರ ಪೈಕಿ ಒಬ್ಬರನ್ನು ಕೇಳಿದಾಗ ಅವರು ಅಳುತ್ತಾ ಕಾಂಗ್ರೆ ಗೂಂಡಾಗಳು ತಮ್ಮನ್ನು ಚಿತ್ರಹಿಂಸೆ ಮಾಡುವುದರಿಂದ ತಪ್ಪಿಸಿಕೊಳ್ಳಲು ಓಡುತ್ತಿರುವುದಾಗಿ ಹೇಳಿದರು. ಅನಂತರ ಆ ವ್ಯಕ್ತಿ ಹೋಗಿ ಬೇರೆ ಕಡೆ ಅಡಗಿಕೊಂಡಿದ್ದ ಗ್ರಾಮಸ್ಥರನ್ನು ಕರೆತಂದರು. ಎಲ್ಲರೂ ಮಕ್ಕಳಂತೆ ಅಳುತ್ತಿದ್ದರು. ಅವರು ಅನುಭವಿಸಿದ್ದ ಅಮಾನುಷ ಚಿತ್ರ ಹಿಂಸೆಯ ಭಯಾನಕವಾದ ನೆನಪುಗಳು ಅವರ ಮುಖಗಳ ಮೇಲೆ ಕಾಣುತ್ತಿತ್ತು. ದೀಪ್ತಿ ಸಿನ್ಹಾ ಎಂಬ ಮಹಿಳೆ 23ರ ರಾತ್ರಿಯ ಘಟನೆಗಳಿಂದ ಭಯಭೀತರಾಗಿ ದ್ದರೂ ಸಹ ಬೆಳಿಗ್ಗೆ ಮತಗಟ್ಟೆಗೆ ಹೋಗಿದ್ದರು. ಮತದಾನವು ಶಾಂತ ರೀತಿ ಯಿಂದಲೇ ಪ್ರಾರಂಭವಾಗಿದ್ದಿತು. ಸುಮಾರು ಒಂಬತ್ತುವರೆ ಗಂಟೆಗೆ ಸುಮಾರು ಇನ್ನೂರು ಕಾಂಗ್ರೆ ಗೂಂಡಾಗಳು ಲಾರಿ ಮತ್ತು ಜೀಪುಗಳಲ್ಲಿ ಅಲ್ಲಿಗೆ ಬಂದರು. ಅವರೆಲ್ಲ ಹೊರಗಿನವರಾಗಿದ್ದರು. ಅವರು ನೇರವಾಗಿ ಮತಗಟ್ಟೆಗೆ ಹೋದರು. ಸಿ.ಪಿ.ಐ.(ಎಂ) ಪೋಲಿಂಗ್ ಏಜೆಂಟ್‌ನ ಕುತ್ತಿಗೆಯನ್ನು ಹಿಡಿದು ಹೊರಗೆ ಎಳೆದುಕೊಂಡು ಹೋಗಿ ಚಿತ್ರಹಿಂಸೆ ಮಾಡಿದರು. ಆ ಗೂಂಡಾಗಳು ಸಿ.ಪಿ.ಐ.(ಎಂ) ಬೆಂಬಲಿಗರು ಯಾರು ಎಂಬುದನ್ನು ತೋರಿಸಲು ಸ್ಥಳೀಯ ಕಾಂಗ್ರೆ ಜನರನ್ನು ಕೇಳಿದರು. ಅಲ್ಲಿಯವರೂ ಯಾರನ್ನೂ ತೋರಿಸದಿದ್ದುದನ್ನು ಕಂಡು ಗೂಂಡಾಗಳು ಎಲ್ಲರ ಮೇಲೆ ಬಾಂಬುಗಳನ್ನು ಎಸೆಯಲಾರಂಭಿಸಿದರು. ಗೂಂಡಾಗಳು ಓಡುತ್ತಿದ್ದ ಮಹಿಳೆಯರನ್ನು ಅಟ್ಟಿಸಿಕೊಂಡು ಹೋದರು. ಮಾನು ಸಿನ್ಹಾನ ಮಗಳು ತಾರಾ ಸಿನ್ಹಾಳ ಮಾನಭಂಗ ಮಾಡಿದರು. ಸಿಪಿಐ (ಎಂ) ಭಿತ್ತಿಪತ್ರಗಳನ್ನು ಹರಿದು ಹಾಕುವುದು ಮತ್ತು ಸಿಪಿಐ(ಎಂ) ಬೆಂಬಲಿಗ ರನ್ನು ಬೆದರಿಸುವುದು ಹಿಂದಿನ ದಿವಸವೇ ಪ್ರಾರಂಭವಾಯಿತು ಎಂದು ಅಲ್ಲಿಯ

ಎರಡನೆಯ ಬೂತಿನ ಪೋಲಿಂಗ್ ಏಜೆಂಟರಾಗಿದ್ದ ರಾಮಸಿನ್ಹ ಹೇಳಿದರು. 80 ಮಂದಿ ಮತದಾರರು ಮತ ಚಲಾಯಿಸಿದ ನಂತರ ದೀಪಕ್ ನಾಗ್ ಎಂಬ ಕಾಂಗ್ರೆಸ್ ಎಂ.ಎಲ್.ಎ. ಮತಗಟ್ಟೆಯನ್ನು ಪ್ರವೇಶಿಸಿ ಪ್ರಿಸೈಡಿಂಗ್ ಆಫೀಸರ ಕಿವಿಯಲ್ಲಿ ಏನೋ ಪಿಸುಮಾತು ಹೇಳಿದರು. ಅನಂತರ ಪೋಲಿಂಗ್ ಚೇಂಬರಿನ ಪಕ್ಕದಲ್ಲಿದ್ದ ಕಿಟಕಿಯನ್ನು ತೆರೆಯಲಾಯಿತು. ಇದರಿಂದಾಗಿ ಮತದಾರರು ಯಾರಿಗೆ ಮತ ಹಾಕುತ್ತಾರೆಂಬುದನ್ನು ಹೊರಗೆ ನಿಂತವರು ನೋಡಬಹುದಾಗಿತ್ತು. ಒಬ್ಬ ಟಿಯುಜೆಎಸ್ ಶಾಸಕ ಬುದ್ಧದೇವ ಬರ್ಮ ಮತ್ತು ಕೈಲಾಸ ಶಹರಿನ ಸರ್ಕಾರಿ ವಕೀಲ ಹರಿದಾಸ ಸಿನ್ಹ ಹೊರಗೆ ನಿಂತು ನೋಡುತ್ತಿದ್ದರು.

ಈ ತಂಡವು ಕೃಷ್ಣ ನಗರದಲ್ಲಿರುವ ಬಲಮಾಲಿ ಧರ್‌ರ ಮನೆಗೆ ಭೇಟಿ ಕೊಟ್ಟಿತು. ಧರ್ ಸಿ.ಪಿ.ಐ.(ಎಂ) ಉಮೇದುವಾರರ ಪೋಲಿಂಗ್ ಏಜಂಟರಾಗಿದ್ದರು. ಅವರು ಮನೆಯಲ್ಲಿರಲಿಲ್ಲ, ಅವರ ಮಡದಿ ಸಫಾಲಿಧರ್ ತಮ್ಮ ಅನುಭವಗಳನ್ನು ಹೇಳಿದರು. ಏಪ್ರಿಲ್ 23ರಂದು ಕೇಂದ್ರ ಮೀಸಲು ಪಡೆಯವರ (ಸಿ.ಆರ್.ಪಿ.) ರಕ್ಷಣೆಯಲ್ಲಿ ಕೆಲವು ರೌಡಿಗಳು ಅವರ ಮನೆಯನ್ನು ಪ್ರವೇಶಿಸಿದ್ದರು. ತನ್ನ ಗಂಡ ಮತ್ತು ಮಗ ಇದ್ದಾರೆಯೇ ಎಂದು ಅವರು ಕೇಳಿದ್ದರು. ತಾನು ಟಿ.ಎನ್.ವಿ.ಯವರಿಗೆ ಆಶ್ರಯ ಕೊಟ್ಟಿರುವುದಾಗಿ ಆಪಾದಿಸಿ ತಮ್ಮ ಮನೆಯನ್ನು ಹುಡುಕಿದರು. ಮರುದಿವಸ ತಾನು ಮತಗಟ್ಟೆಗೆ ಹೋದದ್ದೇ ಆದರೆ ಮಾನಭಂಗ ಮಾಡುವುದಾಗಿ ಹೆದರಿಸಿ ಹಿಂತಿರುಗಿದರು. ಅವರ ಬೆದರಿಕೆಯನ್ನು ಲೆಕ್ಕಿಸದೆ ಇವರು ಮರುದಿವಸ ಮತಗಟ್ಟೆಗೆ ಹೋದರು, ತನಗೆ ಕೊಟ್ಟ ಮತ ಚೀಟಿಯಲ್ಲಿ ಸಿ.ಪಿ.ಐ (ಎಂ) ಚುನಾವಣಾ ಚಿಹ್ನೆಯಾದ ಕುಡುಗೋಲು, ಸುತ್ತಿಗೆ, ನಕ್ಷತ್ರದ ಚಿಹ್ನೆಯ ಮೇಲೆ ಮಸಿ ಬಿದ್ದಿರುವುದು ಕಂಡುಬಂದಿತು. ನಾನು ಮತ ಹಾಕಲಿಲ್ಲ. ಮತಹಾಕದೆ ತಾನು ಹೊರಗೆ ಬಂದಾಗ ಪಂಚಾಯತ್ ಸಚಿವ ಬೀರ್‌ಜಿತ್ ಸಿನ್ಹ ಮತಗಟ್ಟೆಯ ಹೊರಗೆ ತನ್ನ ಗಂಡನನ್ನು ಹೊಡೆಯುತ್ತಿದ್ದುದು ಕಂಡುಬಂದಿತು. ತಾವೇ ಹೊಡೆದು ಸಾಕಾದಾಗ ಸಚಿವರು ತನ್ನ ಗಂಡನನ್ನು ಗೂಂಡಾಗಳ ವಶಕ್ಕೆ ಒಪ್ಪಿಸಿದರು. ಅವರ ಪ್ರಜ್ಞೆ ಹೋಗುವವರೆಗೆ ಅವರನ್ನು ಚಿತ್ರಹಿಂಸೆ ಮಾಡಿದರು. ಇವುಗಳನ್ನು ಕಂಡು ವಿಪರೀತ ಹೆದರಿಕೆಯಾಗಿ ಸೆಫಾಲಾಧರ್

ಕಾಂಗ್ರೆ ಪಕ್ಷದ ಬೆಂಬಲಿಗರೊಬ್ಬರ ಮನೆಹೊಕ್ಕು ರಕ್ಷಣೆ ಪಡೆಯಬೇಕಾಯಿತು.
ತಂಡವು ಕೃಷ್ಣ ನಗರದ ಬ್ರಜೇಂದ್ರಡೇಯವರ ಮನೆಗೆ ಹೋದಾಗ ಅವರ ಮಗಳು ಬಿಂದುಬಾಲಾ ಡೇ ಅಳುತ್ತಿದ್ದಳು. 23ರ ರಾತ್ರಿಯ ಘಟನೆಗಳನ್ನು ಸ್ಮರಿಸಿಕೊಳ್ಳಲು ಅವಳಿಗೆ ಭಯವಾಗಿದ್ದಿತು. ಕಾಂಗ್ರೆ ಗೂಂಡಾಗಳು ಅವರ ಮನೆಯತ್ತ ಅನೇಕ ಸುತ್ತು ಗುಂಡು ಹಾರಿಸಿದ್ದರು. ಮನೆಯ ಗೋಡೆಗಳ ಮೇಲೆ ಗುಂಡು ತಾಗಿದ ಗುರುತುಗಳಿದ್ದುವು. ಗುಂಡುಗಳು ಬೊಂಬುಗಳ ಗೋಡೆಯನ್ನು ತೂರಿ ಉಗ್ರಾಣವನ್ನು ಹೊಕ್ಕಿದ್ದುವು. ರೈಫಲ್ಲಿನಿಂದ ಹಾರಿಸಿದ ಗುಂಡುಗಳ ಗುರುತುಗಳಂತೆ ಅವು ಕಂಡುವು. ಮುಂಜಾನೆ 3 ಗಂಟೆಗೆ 14-15 ಗೂಂಡಾಗಳು ಬಾಗಿಲನ್ನು ತಟ್ಟಿ ಆಕೆಯ ತಂದೆಯನ್ನು ಕರೆದಿದ್ದರು, ತಂದೆ ಉತ್ತರಿಸಲಿಲ್ಲ. ತಂದೆಯು ಮನೆಯಲ್ಲಿಲ್ಲವೆಂದು ಅಜ್ಜಿ ಉತ್ತರಿಸಿದರು. ಗೂಂಡಾಗಳು ನಂಬಲಿಲ್ಲ. ಅವರು ಐದು ಸುತ್ತು ಗುಂಡು ಹಾರಿಸಿ ಬಾಗಿಲನ್ನು ಮುರಿದು ಒಳಗೆ ನುಗ್ಗಿದರು. ತಂದೆಯನ್ನು ಜುಲುಮೆಯಿಂದ ಹೊರಗೆ ಎಳೆದುಕೊಂಡು ಹೋಗಿ ವಿಪರೀತವಾಗಿ ಚಿತ್ರಹಿಂಸೆ ಮಾಡಿ ಎರಡೂ ಕೈಗಳನ್ನು ಮುರಿದು ಹಾಕಿದರು. ಅಜ್ಜಿ, ತಾಯಿಯನ್ನೂ ಅವರು ಹಿಂಸಿಸದೆ ಬಿಡಲಿಲ್ಲ. ಅವರು ಎಸಗಿದ್ದ ಏಕೈಕ ಅಪರಾಧವೆಂದರೆ ಸಿ.ಪಿ.ಐ.(ಎಂ) ಪಕ್ಷವನ್ನು ಬೆಂಬಲಿಸುತ್ತಿದ್ದುದು ಎಂದು ಅವಳು ಬಿಕ್ಕಿ ಬಿಕ್ಕಿ ಅತ್ತಳು.

ಅಲ್ಲಿಂದ ತಂಡವು ಫತಿಕ್ರಾಯ್‌ಗೆ ಹೋಯಿತು. ಫತಿಕ್ರಾಯ್ ಬೂತಿನ ಪೋಲಿಂಗ್ ಏಜೆಂಟರಾಗಿದ್ದ ನೃಪೇಂದ್ರ ಚಕ್ರವರ್ತಿಯವರು 24ರಂದು ತಮ್ಮ ಬೂತ್ ಆಕ್ರಮಣದ ಬಗ್ಗೆ ಹೇಳಿದರು. ಅದು ವಿದೇಶೀ ಪಡೆಗಳು ದಂಡೆತ್ತಿ ಬಂದಂತೆ ಇದ್ದಿತು. ಬೆಳಿಗ್ಗೆ ಹತ್ತೂವರೆಯವರೆಗೆ ಏನೂ ಗಲಾಟೆಯಿರಲಿಲ್ಲಿ. ಆಗ ಸುಜೀತ್ ದತ್ತ ಮತ್ತು ಶ್ರೀಮತಿ ಬಿಬಾನಾಥ್ ಇಬ್ಬರೂ ಮಂತ್ರಿಗಳು ಸುಮಾರು ಇನ್ನೂರು ಕಾಂಗ್ರೆ ಸ್ವಯಂ ಸೇವಕರೊಂದಿಗೆ ಆಗಮಿಸಿದರು. ಅವರು ಬಂದು ಸಿ.ಪಿ.ಐ.(ಎಂ)ನ ಇಬ್ಬರು ಪೋಲಿಂಗ್ ಏಜೆಂಟರನ್ನು ಹೊಡೆದು ಹೊರಗೆ ದೂಡಿದರು. ಸಿ.ಪಿ ಐ.(ಎಂ) ಬೂತು, ಭಿತ್ತಿಪತ್ರಗಳು ಮತ್ತು ಬಾವುಟಗಳಿಗೆ ಬೆಂಕಿ ಹಚ್ಚಿ ಸುಟ್ಟರು. ಇದನ್ನು ನೋಡಿ ಕಾಂಗ್ರೆ ಬೆಂಬಲಿಗರೂ

ಸೇರಿದಂತೆ ಅಲ್ಲಿದ್ದವರೆಲ್ಲಾ ಅಲ್ಲಿಂದ ಓಡಿ ಹೋದರು. ಆಗ ಅವರು ಮತ ಚೀಟಿಗಳ ಮೇಲೆ ಮುದ್ರೆ ಒತ್ತುವ ಕೆಲಸವನ್ನು ಪ್ರಾರಂಭಿಸಿದರು

ಕಾಂಗ್ರೆ ಮುಖಂಡರು ಮತ ಕಟ್ಟೆಗಳ ಮೇಲೆ ದಾಳಿ ಮಾಡಿದುದು ಮಾತ್ರವೇ ಅಲ್ಲ, ಸಿ.ಪಿ ಐ.(ಎಂ) ಮುಖಂಡರು ಮತ್ತು ಕಾರ್ಯಕರ್ತರು ಇಳಿದುಕೊಂಡಿದ್ದ ಮನೆಗಳ ಮೇಲೂ ದಾಳಿ ಮಾಡಿದರು. ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಭಾನು ಘೋಷ್, ಮಾಣಿಕ್ ಸರ್ಕಾರ್, ಬೈದ್ಯ ನಾಥ ಮಜುಮ್‌ದಾರ್, ಸಮರ್ ಚೌಧರಿ, ಬಾದಲ್ ಚೌಧರಿ, ಮೋಹನ ಲಾಲ್ ಚಕ್ರ (ಎಡಿಸಿ ಕಾರ್ಯಕಾರಿ ಸಮಿತಿಯ ಸದಸ್ಯ)ರವರು ಚುನಾವಣಾ ಪ್ರಚಾರಕ್ಕೆ ಹೋಗಿದ್ದು ಭಾಬೇಂದ್ರ ಭಟ್ಟಾಚಾರ್ಜಿಯವರ ಮನೆಯಲ್ಲಿ ಇಳಿದು ಕೊಂಡಿದ್ದರು. ಏಪ್ರಿಲ್ 21ರ ನಡುರಾತ್ರಿಯಲ್ಲಿ ಪೋಲೀಸರು ಮನೆಯನ್ನು ಹುಡುಕಲು ಅಲ್ಲಿಗೆ ಹೋದರು. ಆದರೆ ಅವರಲ್ಲಿ ಸರ್ಚ್‌ವಾರೆಂಟ್ ಇಲ್ಲದಿದ್ದುದರಿಂದ ನಿರಾಶರಾಗಿ ಹಿಂತಿರುಗಬೇಕಾಯಿತು. ಆದರೆ ಗೂಂಡಾಗಳು ಮನೆಯಲ್ಲಿದ್ದವರನ್ನು ಪದೇ ಪದೇ ಬೆದರಿಸಿದರು.

ಕಾಲಾಪಾನಿಯ ನೇಪಾಳ್ ಮಲಾಕಾರ್‌ರವರು ತಮ್ಮ ಅನುಭವವನ್ನು ಹೇಳಿದರು. ಏಪ್ರಿಲ್ 23ರ ರಾತ್ರಿ 11 ಗಂಟೆಯ ಸಮಯ, 50-60 ಸಮಾಜ ವಿರೋಧಿಗಳು–ಎಲ್ಲಾ ಹೊರಗಿನವರು–ಬಾಗಿಲು ಬಡಿದು ಮಲಾಕಾರರ ಹೆಸರನ್ನು ಹಿಡಿದು ಕರೆದರು, ಅನಿಲ್ ಸರ್ಕಾರ್ ಕಳಿಸಿರುವುದಾಗಿ ಹೇಳಿದರು. ತಾವು ಅದನ್ನು ನಂಬಲೂ ಇಲ್ಲ, ಬಾಗಿಲನ್ನೂ ತೆರೆಯಲಿಲ್ಲ. ಅವರು ಬಾಗಿಲನ್ನು ಒಡೆದು ಒಳಗೆ ನುಗ್ಗಿ ಮಲಾಕಾರ್ ಮತ್ತು ಅವರ ಮಡದಿಯನ್ನು ವಿಪರೀತವಾಗಿ ಹೊಡೆದು ಹಿಂಸಿಸಿ, ಮನೆಯಲ್ಲಿದ್ದುದನ್ನೆಲ್ಲಾ ಲೂಟಿ ಮಾಡಿದರು. ಮಲಾಕಾರ್ ದಂಪತಿಗಳು ಪ್ರಾಣ ಉಳಿಸಿಕೊಳ್ಳಲು ಕಾಡಿಗೆ ಓಡಬೇಕಾಯಿತು.

ಒಬ್ಬ ಪಕ್ಷೇತರ ಉಮೇದುವಾರರ ಪೋಲಿಂಗ್ ಏಜೆಂಟ್ ಬೀರೇಂದ್ರ ಮಲಾಕಾರ್ ಮತದಾನದ ದಿವಸದ ತಮ್ಮ ಅನುಭವವನ್ನು ಹೇಳಿದರು. ಬೆಳಿಗ್ಗೆ 7 ಗಂಟೆಗೆ ಅವರು ಇತರ ಪೋಲಿಂಗ್ ಏಜೆಂಟರ ಜತೆ ಮತಕಟ್ಟೆಗೆ ಹೋದರು. ಕಾಂಗ್ರೆ ಪೋಲಿಂಗ್ ಏಜಂಟರನ್ನು ಮತಕಟ್ಟೆಯ ಒಳಗೆ ಕೂಡಿಸಿ ಇತರರನ್ನು ಹೊರಗೆ ಕೂಡಿಸಿದರು. ಈ ತಾರತಮ್ಯವೇಕೆಂದು ಕೇಳಿದಾಗ ಪ್ರಿಸೈಡಿಂಗ್

ಆಫೀಸರಿಂದ ಉತ್ತರ ಬರಲಿಲ್ಲ. ಕಾಂಗ್ರೆಸ್ ಪೋಲಿಂಗ್ ಏಜೆಂಟ್ ಮತದಾರರಿಗೆ ಕಾಂಗ್ರೆಸ್‌ಗೆ ಮತನೀಡಲು ಹೇಳುತ್ತಿದ್ದರು. ಗುರುತು ಹಾಕಿದ ಮತ ಚೀಟಿಗಳನ್ನು ಬಿಡಿಸಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆಯೇ ಇಲ್ಲವೇ ಎಂದು ಆ ಏಜೆಂಟ್ ನೋಡುತ್ತಿದ್ದರು. ಇದನ್ನು ಆಕ್ಷೇಪಿಸಿದಾಗ ಸಿ ಆರ್.ಪಿ. ನೆರವಿನಿಂದ ಇತರ ಪೋಲಿಂಗ್ ಏಜೆಂಟರನ್ನು ಓಡಿಸಲಾಯಿತು. ಸಿ ಪಿ ಐ (ಎಂ) ಬೆಂಬಲಿಗರನ್ನು ಮಧ್ಯಾಹ್ನ ಎರಡೂವರೆ ಗಂಟೆಯವರೆಗೆ ಹಿಡಿದಿಟ್ಟದ್ದು ಅನಂತರ ಓಡಿಸಲಾಯಿತು. ಕಾಂಗ್ರೆಸ್ ಶಾಸಕ ದಿಲೀಪ್ ಸರ್ಕಾರ ಈ ಮತಕಟ್ಟೆಯ ಜವಾಬ್ದಾರಿ ವಹಿಸಿದ್ದರು.

ತಂಡವು ಸಾಯಿದಾಪುರ್ ಮತಕಟ್ಟೆಯಲ್ಲಿ ಕುಪ್ರಖ್ಯಾತ ಕ್ರಿಮಿನಲ್ ಮಾಣಿಕ್ ಚಕ್ರಬರ್ತಿ ಎಸಗಿದ್ದ ದೌರ್ಜನ್ಯಗಳ ಕುರಿತು ಸ್ಥಳೀಯರು ಹೇಳುವುದನ್ನು ಕೇಳಿತು. ಆ ಹಳ್ಳಿಯ ಪಂಚಾಯತ್ ಅಧ್ಯಕ್ಷ ಬಿಭುಸೇನರು ತಮ್ಮ ಮನೆಯನ್ನು ನೆರೆಯವರಿಗೆ ಒಪ್ಪಿಸಿ ಓಡಿ ಹೋಗಬೇಕಾಯಿತು. ಸಿ.ಪಿ.ಐ(ಎಂ)ನ ಒಬ್ಬ ವೃದ್ಧ ಬೆಂಬಲಿಗ ನಿತ್ಯಾನಂದ ದೇಬ್ ಏಪ್ರಿಲ್ 21ರ ರಾತ್ರಿಯ ಭಯಾನಕ ಘಟನೆಗಳನ್ನು ಸ್ಮರಿಸಿದರು. ಅಂದು ಮಾಣಿಕ್ ಚಕ್ರಬರ್ತಿ ಡಿ ವೈ ಎಫ್ ಐ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಸಂಜಯ್ ಭಟ್ಟಾಚಾರ್ಜಿಯನ್ನು ಕರೆಸಿಕೊಂಡು ಸಿಪಿಐ(ಎಂ)ನ್ನು ಬಿಟ್ಟು ಕಾಂಗ್ರೆಸ್‌ಗೆ ಕೆಲಸ ಮಾಡಲು ಹೇಳಿದರು. ಕಾಂಗ್ರೆಸ್‌ಗೆ ಕೆಲಸ ಮಾಡಿದರೆ ಸರ್ಕಾರಿ ನೌಕರಿ, ಸರ್ಕಾರಿ ಕಾಂಟ್ರ್ಯಾಕ್ಟ್, ದೊಡ್ಡ ಮೊತ್ತದ ಸಾಲ ಏನು ಬೇಕಾದರೂ ಕೊಡಿಸುವುದಾಗಿ ಹೇಳಿದರು. ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಮದಾರ್ ತನ್ನ ನಿರ್ದೇಶನದ ಪ್ರಕಾರ ಕೆಲಸ ಮಾಡುತ್ತಿರುವುದಾಗಿ ಕೊಚ್ಚಿಕೊಂಡರು (!) ಮರುದಿವಸ ಸಂಜಯ್ ಭಟ್ಟಾಚಾರ್ಜಿಯ ತಮ್ಮ ದೀಪಕ್ ಭಟ್ಟಾಚಾರ್ಜಿಯನ್ನು ಕರೆಸಿ ಅವರ ಕಡೆ ಎರಡು ಪಿಸ್ತೂಲುಗಳನ್ನು ಗುರಿಯಿಟ್ಟು ಮಾಣಿಕ ಚಕ್ರಬರ್ತಿ ನಿಮ್ಮ ಪ್ರಜಾಪ್ರಭುತ್ವ ನಿನ್ನ ಪ್ರಾಣವನ್ನು ರಕ್ಷಣೆ ಮಾಡಲಾರದು. ಪಕ್ಷವನ್ನು ಬಿಡುತ್ತೇನೆ ಎಂದು ಹೇಳು ಎಂದು ಬೆದರಿಸಿದ. ಪ್ರಾಣಾಪಾಯದಿಂದ ಪಾರಾಗಲು ದೀಪಕ್ ಹಾಗೆ ಹೇಳಬೇಕಾಯಿತು.

ಮಾಣಿಕ್ ಚಕ್ರಬರ್ತಿ ಮಾತ್ರವೇ ಅಲ್ಲ, ಸಚಿವ ಮತಿಲಾಲ್ ಸಹರವರೇ ಏಪ್ರಿಲ್ 23ರಂದು ಜನರನ್ನು ಹೊಡೆಯಲಾರಂಭಿಸಿದರು. ಸಿಪಿಐ(ಎಂ)

ಉಮೇದುವಾರ ಭೂದೇಬ್ ಭಟ್ಟಾಚಾರ್ಜಿಯವರ ದಾಯಾದಿ ಉಪಾಧ್ಯಾಯ ಪರಿಮಳ ಭಟ್ಟಾಚಾರ್ಜಿ ಈ ದಾಳಿಯ ಮೊದಲ ಬಲಿ. ಅದೇ ದಿವಸ 150ರಿಂದ 175ರಷ್ಟಿದ್ದ ಕಾಂಗ್ರೆ ಗೂಂಡಾಗಳು ಬಿನಯ್‌ಡೇ ಯವರ ಮನೆಯ ಮೇಲೆ ದಾಳಿ ಮಾಡಿದರು. ಗೂಂಡಾಗಳು ಬಿನಯ್‌ಡೇಯವರನ್ನು, ಅವರ ಸಹೋದರ ಸುರ್ಜಿತ್‌ಡೇಯವರನ್ನು, ಹೆಂಡತಿ ಅರ್ಚನಾ ಡೇಯವರನ್ನು ಹೊಡೆದು ಹಿಂಸಿಸಿದರು. ಎಲ್ಲರಿಗೂ ಗಂಭೀರವಾದ ಗಾಯಗಳಾದವು. ಗರ್ಭಿಣಿ ಅರ್ಚನಾ ಡೇಯವರನ್ನು ಸಿಲ್ಚಾರ್(ಅಸ್ಸಾಮ್)ಆಸ್ಪತ್ರೆಗೆ ಸೇರಿಸಬೇಕಾಯಿತು.

ಯಾಕೂಬ್ ಅಲಿಯವರ ನಾಯಕತ್ವದಲ್ಲಿ 15 ರಿಂದ 20 ಗೂಂಡಾಗಳು ಏಪ್ರಿಲ್ 22ರ ಸಂಜೆ ಸಯಿದಾರ್‌ಪಲ್ಲಿ ಸುಬೋಧ್ ದೇವನಾಥರ ಮನೆಗೆ ನುಗ್ಗಿ ಅವರ ಮಡದಿ ಸೀತಾ ದೇವನಾಥ್ ಮತ್ತು ಮಗಳನ್ನು ಹೊಡೆದು ಅಡಿಗೆ ಮನೆಯಲ್ಲಿದ್ದ ವಸ್ತುಗಳನ್ನೆಲ್ಲಾ ನಾಶಮಾಡಿ ಆಕೆಯ ಗಂಡ ಮತ್ತು ಮಗ ಸಿಪಿಐ(ಎಂ)ನ್ನು ಬಿಡದಿದ್ದರೆ ಭಯಾನಕ ಪರಿಣಾಮಗಳನ್ನು ಎದುರಿಸ ಬೇಕಾದೀತೆಂದು ಹೆದರಿಸಿ ಹೋದರು.

ಮತದಾನದಂದು ಸಂಭವಿಸಿದ ಘಟನೆಗಳನ್ನು ನಿತ್ಯಾನಂದರಾಯ್ ಹೇಳಿದರು. ಬೆಳಿಗ್ಗೆ 9-30 ಕ್ಕೆ ನೂರು–ನೂರೈವತ್ತು ಕಾಂಗ್ರೆ ಗೂಂಡಾಗಳು ಬಂದರು. ಅವರೆಲ್ಲಾ ಹೊರಗಿನವರು. ಮತದಾನಕ್ಕಾಗಿ ಕ್ಯೂನಲ್ಲಿ ನಿಂತಿದ್ದವರೆಲ್ಲರ ಬೆರಳುಗಳಿಗೂ ಅವರು ಶಾಯಿ ಗುರುತು ಹಾಕಿ ಮನೆಗೆ ಹೋಗಲು ಹೇಳಿದರು. ಸಿಪಿಐ(ಎಂ)ಉಮೇದುವಾರ ಭೂದೇವ್ ಭಟ್ಟಾ ಚಾರ್ಜಿ ಮತಗಟ್ಟೆಗೆ ಬಂದಾಗ ಸಚಿವ ಮತಿಲಾಲ್ ಸಹ ಅವರನ್ನು ಒಳಗೆ ಬಿಡ ಕೂಡದೆಂದು ತನ್ನ ಹಿಂಬಾಲಕರಿಗೆ ಆಜ್ಞಾಪಿಸಿದರು ಅವರನ್ನು ಒಳಗೆ ಬಿಡಲಿಲ್ಲ. ಅನಂತರ ಸಚಿವರು ಮತಕಟ್ಟೆಯನ್ನು ಪ್ರವೇಶಿಸಿ ಪ್ರಿಸೈಡಿಂಗ್ ಆಫೀಸರಿಂದ ಮತಚೀಟಿಗಳನ್ನು ಪಡೆದುಕೊಂಡು ಅವುಗಳಿಗೆ ತಾವೇ ಮುದ್ರೆ ಹಾಕ ಲಾರಂಭಿಸಿದರು.

ತಂಡವು ಎಪ್ರುಪಾಸಾ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತಿಯ ಮಾಜಿ ಅಧ್ಯಕ್ಷ ಸಿಪಿಐ(ಎಂ)ನ ಜತೀಂದ್ರ ದತ್ತರ ಮನೆಗೆ ಹೋದರು. ಅವರು ಉತ್ತಮ ಸ್ಥಿತಿಯಲ್ಲಿರುವ ಒಬ್ಬ ಬೇಸಾಯಗಾರ. ಏಪ್ರಿಲ್ 23ರ ಘಟನೆಗಳನ್ನು ಅವರು ಸ್ಮರಿಸಿದ್ದರು. ರಾತ್ರಿ 9 ಗಂಟೆಯ ವೇಳೆಗೆ "ಹೊರಟು ಹೋಗಿ, ಹೋಗಿ"

ಎಂದು ಯಾರೋ ಅರಚುವ ಧ್ವನಿ ಕೇಳಿಸಿತು. ದತ್ತರು ಹೊರಗೆ ಬಂದು ನೋಡುವಾಗ 40–50 ಲಾರಿಗಳು ನಿಂತಿವೆ. ಅವೆಲ್ಲವುಗಳ ತುಂಬಾ ರೌಡಿಗಳು, ಕ್ರಿಮಿನಲ್‌ಗಳು. ಮನೆ ಮಂದಿಯನ್ನು ಕರೆದುಕೊಂಡು ಅವರು ಹಿಂಬಾಗಿಲಿನಿಂದ ಓಡಿಹೋದರು. ಗೂಂಡಾಗಳು ಅವರ ಮನೆಯ ಎಲ್ಲ ಬಾಗಿಲು ಕಿಟಕಿಗಳನ್ನು ಒಡೆದು ಹಾಕಿದರೆಂದು ಅವರ ನೆರೆ ಮನೆಯವರು ಹೇಳಿದರು. ಬೆಳಗಾಗುವ ಮುನ್ನ ಗೂಂಡಾಗಳು ಮತ್ತೆ ಬಂದರು, ಅವರ ಮನೆಯನ್ನು ಲೂಟಿ ಮಾಡಿ ಇದ್ದ ಬದ್ದದನ್ನೆಲ್ಲ ಕೊಂಡೊಯ್ದರು. ಅವರು ನಗದು 12,000 ರೂಪಾಯಿಗಳನ್ನು 10 ಗ್ರಾಂ ಚಿನ್ನವನ್ನು ಕೊಂಡೊಯ್ದರು. ನೆರೆ ಹೊರೆಯವರು ಹೇಳಿದ್ದೇನೆಂದರೆ, ಆ ರಾತ್ರಿ ಬಂದಿದ್ದ ಅಷ್ಟೊಂದು ವಾಹನಗಳ ನಡುವೆ 'ವಿಐಪಿ' ಸಂಕೇತವನ್ನು ಸೂಚಿಸುವ ಮೇಲ್ಭಾಗದಲ್ಲಿ ಕೆಂಪು ದೀಪಗಳಿದ್ದ ವಾಹನಗಳೂ ಇದ್ದುವು ಎಂದು ಅಂದು ಮನೆಯಿಂದ ಹೋದ ದತ್ತಾ ಮತ್ತು ಅವರ ಕುಟುಂಬದವರು ಹಿಂದಿನ ದಿವಸ ಮಾತ್ರ ಮರಳಿ ಬಂದಿದ್ದಾರೆ. ಇನ್ನೂ ಸಹ ಅವರು ಮನೆಯಲ್ಲಿ ಮಲಗುತ್ತಿಲ್ಲ

ದತ್ತರ ಮನೆಯ ಸ್ವಲ್ಪ ದೂರದಲ್ಲಿ ಇದ್ದ ಪ್ರೇಮಾನಂದ ದಾಸರ ಮನೆಯನ್ನು ಪ್ರಾಯಶಃ ಅದೇ ಡಕಾಯಿತರ ಗುಂಪು ಲೂಟಿ ಮಾಡಿತು. ದಾಸ್ ಹೇಳಿದರು ಅಂದು ರಾತ್ರಿ ಅವರು ಎಲ್ಲ ಬಾಗಿಲು ಕಿಟಕಿಗಳನ್ನು ಮುಚ್ಚಿ ಮಲಗಿದ್ದರು, ಡಕಾಯಿತರು ಬಾಗಿಲನ್ನು ಒಡೆದು ಒಳಗೆ ಬಂದರು, ಹಣ ಬೇಕೆಂದು ಅವರು ಒತ್ತಾಯ ಮಾಡಿದರು. ದಾಸ್‌ರವರು ಸುಮ್ಮನಿದ್ದುದರಿಂದ ಅವರ 5 ವರ್ಷದ ಮಗಳು ಶೀಲಿ ದಾಸ್‌ಳನ್ನು ನೆಲದ ಮೇಲೆ ಎಸೆದು ಅನಂತರ ಮೇಲಕ್ಕೆ ಎತ್ತಿ ಅವರು ಕೇಳಿದ್ದನ್ನು ಕೊಡದಿದ್ದರೆ ಮಗುವನ್ನು ಕೊಲ್ಲುವುದಾಗಿ ಹೇಳಿದರು 5000 ರೂಪಾಯಿ ಬೆಲೆ ಬಾಳುವ ಚಿನ್ನದ ಆಭರಣಗಳೂ ಸೇರಿದಂತೆ ಮನೆಯಲ್ಲಿದುದ್ದನ್ನೆಲ್ಲ ಅವರು ಲೂಟಿ ಮಾಡಿದರು. ದಾಸ್‌ರ ತಪ್ಪೇನೆಂದರೆ ಅವರ ಮಗ ಸುಧಾಂಗ್‌ಶು ದಾಸ್ ಎಸ್.ಎಫ್.ಐ.ನ ಒಬ್ಬ ಕಾರ್ಯಕರ್ತನಾಗಿದ್ದುದು. ಮತದಾನದ ದಿವಸ ಆ ವಿದ್ಯಾರ್ಥಿಯನ್ನು ತೀವ್ರವಾಗಿ ಥಳಿಸಿ ಯಾವುದೇ ಕಾರಣ ಕೊಡದೆ ಲಾಕಪ್ಪಿನಲ್ಲಿಟ್ಟಿದ್ದರು.

ಎಮ್ರಾ ಪಾಸಾದಲ್ಲಿದ್ದ ಸಿ.ಪಿ.ಐ.(ಎಂ) ಆಫೀಸು ಪಕ್ಷದ ಕಾರ್ಯಕರ್ತರ ಚುನಾವಣಾ ಶಿಬಿರವಾಗಿದ್ದಿತು. ಮಹಿಳಾ ಸಂಘಟನೆಯ ನಾಯಕಿ

ಯರಾದ ಮಂಜುಳಿಕಾ ಬಸು, ಚೌಪಾಲಾ ಬಿಶ್ವಾಸ್ ಫತಿಕ್ರಾಯ್ ಕ್ಷೇತ್ರದ ಮಾಜಿ ಸಿ.ಪಿ.ಐ.(ಎಂ) ಶಾಸಕ ದಿವಂಗತ ತರುಣ ಮೋಹನ್ ಸಿನ್ಹಾರವರ ಪತ್ನಿ ರಾಧಾರಾಣಿ ಸಿನ್ಹಾ ಡಿ.ವೈ.ಎಫ್.ಐ. ರಾಜ್ಯ ಸಮಿತಿಯ ಕಾರ್ಯದರ್ಶಿ ಪಬಿತ್ರ ಕಾರ್ ಅಲ್ಲಿ ಇಳಿದುಕೊಂಡಿದ್ದರು. ಸಚಿವರುಗಳಾದ ಮತಿಲಾಲ್ ಸಹ ಮತ್ತು ರತನ್ ಚಕ್ರವರ್ತಿ ಖಾಯೆರ್‌ಪುರದ ಕಾಂಗ್ರೆಸ್ ಶಾಸಕ ರತನ್ ಘೋಷ್ ಹಠಾತ್ತಾಗಿ ಪ್ರತ್ಯಕ್ಷರಾದರು. ಅವರುಗಳೊಂದಿಗೆ ಗೂಂಡಾಗಳ ಒಂದು ಸೇನೆಯೇ ಬಂದಿತು. ಆ ಗೂಂಡಾಗಳು ಧಾಳಿ ಮಾಡಿ ಪಬಿತ್ರಕಾರ್‌ರನ್ನು ಕೊಲ್ಲಲು ಪ್ರಯತ್ನಿಸಿದರು. ಅವರ ಎರಡೂ ಕೈಗಳ ಮೇಲೆ ತೀವ್ರ ಸ್ವರೂಪದ ಗಾಯಗಳಾದುವು. ಗೂಂಡಾಗಳು ಮಹಿಳಾ ಸಂಘಟನೆಯ ನಾಯಕಿಯರನ್ನು ಬಿಡಲಿಲ್ಲ. ರೌಡಿಗಳ ಅಕೃತ್ಯಗಳನ್ನು ಮಂತ್ರಿಗಳು ಗಮನಿಸುತ್ತಾ ನಿಂತಿದ್ದರು.

ಏಪ್ರಿಲ್ 23ರ ನಡುರಾತ್ರಿ ಸಬರೂಂ ಕ್ಷೇತ್ರದ ಸಿ.ಪಿ.ಐ.(ಎಂ) ಶಾಸಕ ಸುನೀಲ್ ಚೌಧುರಿಯನ್ನು ಅವರು ಇಳಿದು ಕೊಂಡಿದ್ದ ನೃಪೇಂದ್ರ ಮಾಲಾಕೌರ್ ರವರ ಮನೆಯಲ್ಲಿಯೇ ಕೊಲೆ ಮಾಡುವ ಪ್ರಯತ್ನ ನಡೆಯಿತು. ಆ ರಾತ್ರಿಯ ದುರ್ಘಟನೆಗಳನ್ನು ಸ್ಮರಿಸಿಕೊಂಡು ಮಾಲಾಕಾರರ ವಯೋವೃದ್ಧ ತಂದೆ, ಅವರ ಹೆಂಡತಿ ಮತ್ತು ಮಗಳು ಕಣ್ಣೀರಿಟ್ಟರು. 23ರ ರಾತ್ರಿ ಮನೆಗೆ ಹಿಂತಿರುಗುತ್ತಿದ್ದಾಗ ಹಲವಾರು ಅಪರಿಚಿತ ಮುಖಗಳನ್ನು ಅವರ ಮನೆಯ ಸುತ್ತ ಕಂಡರು. ನಡುರಾತ್ರಿಯಲ್ಲಿ ಅವರಲ್ಲಿ ಕೆಲವರು ಮನೆಯ ಒಳಹೊಕ್ಕು ಪಂಚಾಯತ್ ಅಧ್ಯಕ್ಷರು ಎಲ್ಲಿ ಎಂಬುದಾಗಿ ಕೇಳಿದರು. ಮಾಲಾಕೌರರಿಗೆ ಹೆದರಿಕೆಯಾಯಿತು. ಸುನಿಲ್ ಚೌಧುರಿಯವರು ಇದ್ದ ಕೊಠಡಿಯ ಕಡೆ ಗೂಂಡಾಗಳು ಹೋಗುತ್ತಿದ್ದರು. ಮಾಲಾಕಾರರು ಮೆಲ್ಲಗೆ ಗೂಂಡಾಗಳ ಕಣ್ಣು ತಪ್ಪಿಸಿ ಹೊರಗೆ ಹೋದರು. ಅವರಿಗೆ ಎರಡು ಗುಂಡೇಟಿನ ಸದ್ದು ಕೇಳಿಸಿತು. ಅಂದು ಮನೆಯನ್ನು ಬಿಟ್ಟ ಮಾಲಾಕಾರರು ಹಿಂದಿನ ದಿವಸ ಹಿಂದಿರುಗಿದ್ದರು. ಸುನೀಲ್ ಚೌಧರಿಯವರನ್ನು ಕೊಲ್ಲಲು ಬಂದಿದ್ದವರ ಪೈಕಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕೈಲಾಸ್‌ಶಹರ್ ಶಾಖೆಯ ನೌಕರ ರತನ್ ದೇಬ್ ಎಂಬುವವರೂ ಇದ್ದರು. ಅವರು ಅಗರ್ತಲದವರು. ಈಗ ಅವರು ಜಿ. ಬಿ. ಆಸ್ಪತ್ರೆಯಲ್ಲಿ ಇದ್ದಾರೆ. ಅವರನ್ನು ಬಂಧಿಸಿದರೋ ಇಲ್ಲವೋ ಎಂಬುದು ಗೊತ್ತಿಲ್ಲ. ಆ ರಾತ್ರಿಯ ಇನ್ನೊಬ್ಬ ಗಾಯಾಳು ಸುಧಾ

ಡೇ ಒಬ್ಬ ಸ್ಥಳೀಯ ಹುಡುಗ, ಸುರೇಶ್ ಡೇಯುವರ ಮಗ. ಫತಿಕ್ರಾಯ್ ಪೋಲೀಸ್ ಠಾಣೆಯ ಮುಖ್ಯಾಧಿಕಾರಿ ಸುಧಾ ಡೇಯನ್ನು ಮಲಾಕಾರರ ಮನೆಯಿಂದ ಕರೆದುಕೊಂಡು ಹೋದರು. ಆದರೆ ಆ ರಾತ್ರಿಯ ಘಟನೆಯ ಬಗ್ಗೆ ಆ ಅಧಿಕಾರಿ ಏನನ್ನೂ ಕೇಳಲಿಲ್ಲ.

ಶಾಸಕ ಸುನಿಲ್ ಚೌಧುರಿಯವರು ಕೊಟ್ಟಿರುವ ಹೇಳಿಕೆಯಲ್ಲಿ ಹೀಗೆಂದಿದ್ದಾರೆ. "ಎನ್ಫ್ರಾ ಪಾಸಾದ ಪಂಚಾಯತ್ ಅಧ್ಯಕ್ಷ ನೃಪೇಂದ್ರ ಮಲಾಕಾರ್‌ರವರ ಮನೆಯನ್ನು ಏಪ್ರಿಲ್ 23ರ ಮಧ್ಯರಾತ್ರಿ ನಲವತ್ತರಿಂದ ಐವತ್ತು ಮಂದಿ ಸಶಸ್ತ್ರ ಗೂಂಡಾಗಳು ಸುತ್ತುವರಿದರು. ಮಲಾಕಾರರು ಅಲ್ಲಿದ್ದರು. ಗೂಂಡಾಗಳು ಮೊದಲು ಮಲಾಕಾರರನ್ನು ಕೆಟ್ಟ ಭಾಷೆಯಲ್ಲಿ ಬಯ್ದರು ಮತ್ತು ಅವರನ್ನು ಸಾಯಿಸುವುದಾಗಿ ಹೆದರಿಸಿದರು. ಅಪಾಯ ಇರುವುದೆಂದು ಭಾವಿಸಿ ನನ್ನ ಸೆಕ್ಯೂರಿಟಿ ಪಾಲಕರಾದ ರಬೀಂದ್ರಪಾಲ್ ಮತ್ತು ಕೇವೊ ಜಾಲ್‌ಮಾಗ್‌ರವರ ಸಹಾಯದಿಂದ ಮನೆಯಿಂದ ತಪ್ಪಿಸಿ ಕೊಂಡು ಹೋಗಲು ಪ್ರಯತ್ನಿಸಿದರು. ನಾವು ಬಾಗಿಲು ತೆರೆದ ಕೂಡಲೇ ಗೂಂಡಾಗಳು ಕತ್ತಿಗಳಿಂದ ನನ್ನನ್ನು ಕತ್ತರಿಸಲು ಬಂದರು. ಬೇರೆ ಮಾರ್ಗ ವಿರದೆ ನನ್ನ ಸೆಕ್ಯೂರಿಟಿ ಪಾಲಕರು ಎರಡು ಬಾರಿ ಎಚ್ಚರಿಕೆ ಕೊಟ್ಟು, ನಂತರ ಖಾಲಿ ಗುಂಡು ಹಾರಿಸಿದರು. ಇದರಿಂದ ಹೆದರದ ಗೂಂಡಾಗಳು ಮತ್ತೆ ನನ್ನನ್ನು ಕೊಲ್ಲಲು ಪ್ರಯತ್ನಿಸಿದರು. ಬೇರೆ ದಾರಿ ಕಾಣದೆ ಸೆಕ್ಯೂರಿಟಿ ಪಾಲಕರು ಗುಂಡು ಹಾರಿಸಿದರು. ಒಬ್ಬರು ಕೆಳಗೆ ಬಿದ್ದರು. ಸೆಕ್ಯೂರಿಟಿ ಪಾಲಕರಲ್ಲಿ ಎಷ್ಟು ಸುತ್ತು ಗುಂಡುಗಳಿವೆ ನೋಡುತ್ತೇವೆ ಎಂದು ಗೂಂಡಾಗಳು ಮುಂದೆ ಬಂದರು. ಸೆಕ್ಯೂರಿಟಿ ಪಾಲಕರ ಸಹಾಯದಿಂದ ನಾನು ತಪ್ಪಿಸಿ ಕೊಂಡು ಕಾಡಿಗೆ ನುಗ್ಗಿದೆ. ಇಡೀ ರಾತ್ರಿ ಕಾಡುಗಳಲ್ಲಿ ನಡೆದು ನಾನು ಅಂಬಾಸ ಮಾಣಿಕ್ ಬಂದರ್ ರಸ್ತೆಯನ್ನು ತಲುಪಿದೆ. ಅಲ್ಲಿನ ಸ್ಥಳೀಯ ಜನರ ಸಹಾಯದಿಂದ ಅಗರ್ತಲವನ್ನು ತಲುಪಿದೆ.

ಅಲ್ಲಿಂದ ತಂಡವು ದೆಮ್‌ದುಮ್‌ಗೆ ಹೋಯಿತು. ಅಲ್ಲಿನ ಮತಗಟ್ಟೆ ಲಾಲ್‌ಜೂರಿ ಪ್ರೌಢಶಾಲೆಯ ಪ್ರದೇಶದಲ್ಲಿತ್ತು. ಸಿ.ಪಿ ಐ.(ಎಂ) ಪೋಲಿಂಗ್ ಏಜಂಟರಾಗಿದ್ದ ಹೇಮಂತ್ ದೇಬ್‌ಬರ್ಮಾ ಮತ್ತು ಬಿಕಾಶ್ ದೇಬ್‌ಬರ್ಮಾ ಹಿಂದಿನ ಚುನಾವಣೆಗಳೊಂದಿಗೆ ತಮ್ಮ ಅನುಭವಗಳನ್ನು ಹೋಲಿಸಿ ಮಾತ

ಸಾಡಿದರು. ಅವರ ಪ್ರಕಾರ ಇದು ಮತದಾನವೇ ಅಲ್ಲ–ಇದು ಒಂದು **ಗಲಭೆ.** ಅವರು ಮತಗಟ್ಟೆಗೆ ಹೋದಾಗ ಗೂಂಡಾಗಳು ಅವರಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ಬಲಾತ್ಕಾರದಿಂದ ಸುಟ್ಟು ಹಾಕಿದರು. ಭಯೋತ್ಪಾದಕ ತಂತ್ರಗಳಿಗೆ ಬೆದರದೆ ಮತದಾರರು ಕ್ಯೂನಲ್ಲಿ ನಿಂತಿದ್ದರು. ಆದರೆ ಆಗಾಗ್ಗೆ ಆಸ್ಫೋಟವಾಗುತ್ತಿದ್ದ ಬಾಂಬುಗಳು ಮತ್ತು ಜೀವಕ್ಕೆ ಹೆದರಿಕೆ, ಅವರು ಮತಗಟ್ಟೆಯನ್ನು ಬಿಟ್ಟು ಹೋಗುವಂತೆ ಮಾಡಿದವು. ಆಗ ಗೂಂಡಾಗಳು ಮತಗಟ್ಟೆಯನ್ನು ಪ್ರವೇಶಿಸಿ ಅದನ್ನು ಸ್ವಾಧೀನ ಪಡಿಸಿಕೊಂಡರು. ವಾಹನಗಳಲ್ಲಿ ಕೆಲವು ರಿಯಾಂಗ್ ಹುಡುಗಿಯರನ್ನು ಕರೆತಂದರು. ಅವರ ಕೈಯಲ್ಲಿ ಕಾಂಗ್ರೆಗೆ ಮತ ನೀಡಿಸಿ ಫೋಟೋಗಳನ್ನು ತೆಗೆದುಕೊಂಡರು.

ಹೀಗೆ ನೃಪೇನ್ ಚಕ್ರವರ್ತಿಯವರ ನಾಯಕತ್ವದ ತಂಡವು 'ಫತಿಕ್ರಾಯ್' ಕ್ಷೇತ್ರದ ವಿವಿಧ ಮತಗಟ್ಟೆಗಳಿಗೆ ಹೋಗಿ ನ್ಯಾಯವಾದ ಮತದಾನ ನಡೆಯದಂತೆ ಕಾಂಗ್ರೆ-ಟಿ.ಯು.ಜೆ ಎಸ್. ಮೈತ್ರಿಯ ಗೂಂಡಾಗಳು ಏನೆಲ್ಲ ಮಾಡಿದರು ಎಂಬುದನ್ನು ಸಂಬಂಧ ಪಟ್ಟವರಿಂದ ಕಿವಿಯಾರೆ ಕೇಳಿತು. ಪ್ರತಿಯೊಂದು ಕಡೆಯೂ ಕಾಂಗ್ರೆ ಮಂತ್ರಿಗಳು ಇಲ್ಲವೇ ಶಾಸಕರು ಗೂಂಡಾಗಳ, ಪೋಲೀಸರ ಮತ್ತು ಕೇಂದ್ರ ಮೀಸಲು ಪಡೆಯವರನ್ನು ನ್ಯಾಯವಾದ ಮತದಾನ ನಡೆಯದಂತೆ ಮಾಡಲು, ನ್ಯಾಯವಾದ ಚುನಾವಣೆ ನಡೆಯದಂತೆ ಮಾಡಲು ಉಪಯೋಗಿಸಿದ್ದುದು ಕಂಡು ಬಂದಿತು.

ಒಂದು ಪುಟ್ಟ ರಾಜ್ಯದಲ್ಲಿ ಅಧಿಕಾರಕ್ಕಾಗಿ ರಾಜೀವ್ ಗಾಂಧಿಯವರ ಕಾಂಗ್ರೆ ಪಕ್ಷ ಇಂತಹ ಹೀನ ಕೃತ್ಯಗಳನ್ನು ಎಸಗಿ ಪ್ರಜಾಸತ್ತೆಯನ್ನೇ ಬುಡಮೇಲು ಮಾಡುವುದಾದರೆ ಭಾರತದಂತಹ ದೊಡ್ಡ ದೇಶದ ಅಧಿಕಾರವನ್ನು ಉಳಿಸಿಕೊಳ್ಳಲು ಎಂತಹ ಕ್ರೂರ ನಾಶವೀ ದಬ್ಬಾಳಿಕೆಯನ್ನು ನಡೆಸಬಹುದು, ಎಂತೆಂತಹ ಸುಳ್ಳುಗಳನ್ನೆಲ್ಲ ಹೇಳಬಹುದು, ಕಪಟ ನಾಟಕಗಳನ್ನು ಆಡಬಹುದು ಎಂಬುದನ್ನು ಊಹಿಸಬಹುದು.

ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೊ ಫತಿಕ್ರಾಯ್ ಉಪ ಚುನಾವಣೆಯ ಬಗ್ಗೆ ಒಂದು ಹೇಳಿಕೆಯನ್ನು ಹೊರಡಿಸಿ ಈ ಚುನಾವಣೆಯ ಸ್ಪರ್ಧೆಯಿಂದ ವಾಪಸ್ಸು ತೆಗೆದುಕೊಂಡಿರುವುದಾಗಿ ಪ್ರಕಟಿಸಿತು. ಮತಕಟ್ಟೆಗಳ ಮೇಲೆ ವ್ಯಾಪಕವಾದ ಹಿಂಸಾಕೃತ್ಯಗಳು ನಡೆದುದರಿಂದ ಪಕ್ಷದ ಕಾರ್ಯಕರ್ತರು

ಮತ್ತು ಬೆಂಬಲಿಗರ ಮೇಲೆ ಹಿಂಸಾತ್ಮಕವಾದ ಹಲ್ಲೆಗಳು ನಡೆದಿರುವುದರಿಂದ ಮತ ಹಾಕಲು ಬರುತ್ತಿದ್ದ ಮತದಾರರ ಮೇಲೆ ಸಶಸ್ತ್ರ ಧಾಳಿ ನಡೆಯುತ್ತಿದ್ದುದರಿಂದ ಪಕ್ಷವು ತನ್ನ ಎಲ್ಲ ಪೋಲಿಂಗ್ ಏಜಂಟರನ್ನು, ಚುನಾವಣಾ ಏಜಂಟರನ್ನು ಹಿಂತೆಗೆದು ಕೊಂಡಿತು.

ಏಪ್ರಿಲ್ 23ರ ರಾತ್ರಿಯ ವೇಳೆಗೆ 29 ಮತಗಟ್ಟೆಗಳ ಪೈಕಿ 13 ತೀರಾ ಗಲಭೆಗೆ ಗುರಿಯಾಗಿರುವುದಾಗಿ ವರದಿಗಳು ಬಂದವು. ಈ ಪ್ರದೇಶಗಳಲ್ಲಿ ಸಿ.ಪಿ.ಐ.(ಎಂ) ಪಕ್ಷದ ಸಂಘಟಕರನ್ನು ಚುನಾಯಿತ ಗಾಂವ್ ಪ್ರಧಾನರನ್ನು ಮತ್ತು ಇತರ ಕಾರ್ಯಕರ್ತರನ್ನು ದಸ್ತಗಿರಿ ಮಾಡಲಾಗಿದ್ದಿತು. ಇಲ್ಲವೇ ಅವರುಗಳ ಮೇಲೆ ವಾರಂಟುಗಳನ್ನು ಹೊರಡಿಸಲಾಗಿದ್ದಿತು. ಅವರಲ್ಲಿ ಕೆಲವರನ್ನು ಕಾಂಗ್ರೆಸ್ಸಿನವರು ಅಪಹರಿಸಿದ್ದರು ಒಂದು ಕಡೆ ಮಹಿಳಾ ನಾಯಕಿಯರ ಮೇಲೆ ತೀವ್ರವಾದ ಧಾಳಿ ಮಾಡಿ ಇಬ್ಬರು ನಾಯಕಿಯರು ಆಸ್ಪತ್ರೆಗೆ ಸೇರಬೇಕಾಯಿತು.

ಈ ಎಲ್ಲಾ ಗೂಂಡಾ ಧಾಳಿಗಳನ್ನು ಮತ್ತು ಹಿಂಸಾಚಾರವನ್ನು ಈಗಿನ ರಾಜ್ಯ ಸರ್ಕಾರದ ಕ್ರಿಯಾಶೀಲ ಬೆಂಬಲದಿಂದ ಕಾಂಗ್ರೆಸ್ ಪಕ್ಷವು ನಡೆಸಿದೆ. ಈ ಚುನಾವಣೆಗಳಲ್ಲಿ ಬೃಹತ್ ಪ್ರಮಾಣದ ಭ್ರಷ್ಟಾಚಾರದ ಕೆಲಸಗಳು ನಡೆದಿದ್ದು ಅವುಗಳಲ್ಲಿ ಕೆಲವನ್ನು ಆ ಕ್ಷೇತ್ರಕ್ಕೆ ಭೇಟಿ ಕೊಟ್ಟ ಸಂಸತ್ ಸದಸ್ಯರ ತಂಡವು ಕಂಡು ಹಿಡಿದಿದೆ.

ಫತಿಕ್ರಾಯ್‌ಯಲ್ಲಿ ನಡೆದುದು ಚುನಾವಣೆಯ ಅಪಹಾಸ್ಯ. ಕಾಂಗ್ರೆಸ್ ಸರ್ವಾಧಿಕಾರದ ಭಯೋತ್ಪಾದಕ ತಂತ್ರಗಳ ನಗ್ನ ಪ್ರದರ್ಶನವು ಅಲ್ಲಿ ನಡೆದಿದೆ ಸಿಪಿಐ(ಎಂ)ನ ಪೊಲಿಟ್ ಬ್ಯೂರೊ ಈ ಮೋಸದ ಚುನಾವಣೆಯನ್ನು ರದ್ದು ಮಾಡಿ ಈ ಕ್ಷೇತ್ರದಲ್ಲಿ ಹೊಸ ಚುನಾವಣೆಯನ್ನು ನಡೆಸಬೇಕೆಂದು ಆಗ್ರಹ ಪಡಿಸಿದೆ. ಪಕ್ಷದ ಪೊಲಿಟ್‌ಬ್ಯೂರೊ ಸದಸ್ಯರಾದ ನೃಪೇನ್ ಚಕ್ರವರ್ತಿ ಮತ್ತು ಸಮರ್ ಮುಖರ್ಜಿಯವರು ಮುಖ್ಯ ಚುನಾವಣಾ ಕಮೀಷನರನ್ನು ಕಂಡು ಈ ಚುನಾವಣೆಯನ್ನು ರದ್ದುಗೊಳಿಸಿ ಹೊಸ ಚುನಾವಣೆ ನಡೆಸಲು ಮಧ್ಯ ಪ್ರವೇಶ ಮಾಡಬೇಕೆಂದು ಕೇಳಿಕೊಂಡರು.

ಕಾಂಗ್ರೆಸ್ - ಟಿಯುಜೆಎಸ್ ಮೈತ್ರಿ ಸರ್ಕಾರದ ಆಡಳಿತದಲ್ಲಿ :

ಸುಮಾರು ಒಂದೂವರೆ ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆ

ನಡೆದಿಲ್ಲ. ಪ್ರಜಾಸತ್ತಾತ್ಮಕವಾಗಿ ತನ್ನ ಸಂಸ್ಥೆಯ ಚುನಾವಣೆ ನಡೆದುಕೊಳ್ಳದ ಕಾಂಗ್ರೆ ಪಕ್ಷವು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಡುವುದಿಲ್ಲ. ಬಾಯಿ ಮಾತಿನಲ್ಲಿ ಮಾತ್ರ ಪ್ರಜಾಪ್ರಭುತ್ವ. ಭಾರತದಿಂದ ತ್ರಿಪುರವು ಸಿಡಿದು ಪ್ರತ್ಯೇಕವಾಗಬೇಕು ಎಂಬ ನಿಲುವೆಯು ಟಿಯುಜೆಎಸ್ ನೊಂದಿಗೆ ಮೈತ್ರಿ ಮಾಡಿಕೊಂಡ ಕಾಂಗ್ರೆ ಪ್ರಜಾಸತ್ತೆಯನ್ನು ನಾಶಮಾಡುವ ಕ್ರಮಗಳನ್ನು ಅನುಸರಿಸಿ ತ್ರಿಪುರದಲ್ಲಿ ಅಧಿಕಾರ ಗದ್ದುಗೆಯನ್ನೇರಿದ ಈ ಮೈತ್ರಿಯು ಎಡರಂಗದ ಅಧಿಕಾರಾವಧಿಯಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾಗಿದ್ದ ಮತ್ತು ನಡೆಯುತ್ತಿದ್ದ ಎಲ್ಲಾ ಸಂಸ್ಥೆಗಳನ್ನು ವಿಸರ್ಜಿಸಿತು. ತ್ರಿಪುರದ ರಾಜಧಾನಿ ಅಗರ್ತಲಾದ ನಗರಸಭೆಗೆ ಹಿಂದೆ ಕಾಂಗ್ರೆಸ್ ಆಡಳಿತದಲ್ಲಿ 16 ವರ್ಷಗಳ ಕಾಲ ಚುನಾವಣೆ ನಡೆದಿರಲಿಲ್ಲ. ಎಡರಂಗದ ಅಧಿಕಾರಾವಧಿಯಲ್ಲಿ ಎರಡು ಬಾರಿ ಚುನಾವಣೆ ನಡೆದಿದ್ದಿತು. ಮೈತ್ರಿಕೂಟವು ಅಧಿಕಾರಕ್ಕೆ ಬಂದ ಕೂಡಲೇ ಅಗರ್ತಲಾ ನಗರಸಭೆಯನ್ನು ಇತರ ಪುರಸಭೆ, ಪಂಚಾಯತ್ ಸಂಸ್ಥೆಗಳನ್ನು ನೋಟಿಫೈಡ್ ಏರಿಯಾ ಸಮಿತಿಗಳನ್ನು ವಿಸರ್ಜಿಸಿತು. ತ್ರಿಪುರ ವಿಶ್ವವಿದ್ಯಾನಿಲಯದಲ್ಲಿದ್ದ ಪುರೋಗಾಮಿ ಪ್ರತಿನಿಧಿಗಳನ್ನು ಕೈ ಬಿಡಲಾಯಿತು.

ಎಡರಂಗದ ಮೇಲೆ ದಾಳಿ :

ಈ ಸರ್ಕಾರದ ಮೊದಲ ಮೂರು ದಿವಸಗಳ ಅಧಿಕಾರದಲ್ಲಿ ಐವರು ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲೆ ಮಾಡಲಾಯಿತು. ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಮ್‌ದಾರ್ ಎಡರಂಗದವರ ಮನೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಅಡಗಿಸಿಡಲಾಗಿದ್ದು, ಅವುಗಳನ್ನೆಲ್ಲಾ ಸಶಸ್ತ್ರಪಡೆಗಳು ಹೊರತರುವುದಾಗಿ ಘೋಷಿಸಿದರು. ಇದಕ್ಕೆ ಅನುಗುಣವಾಗಿ ಸಶಸ್ತ್ರಪಡೆಗಳ ರಕ್ಷಣೆಯಲ್ಲಿ ಕ್ರಿಮಿನಲ್‌ಗಳು ವಾರೆಂಟಿಲ್ಲದೆ ಮನೆ ಮನೆಗೆ ನುಗ್ಗಿ ಹೆಂಗಸರು ಮಕ್ಕಳು ಎಂಬುದನ್ನು ನೋಡದೆ ಒಳಗಿರುವವರನ್ನು ಹೊಡೆದು ಹಿಂಸಿಸಲಾರಂಭಿಸಿದರು. ಎಡರಂಗದವರು ತಮ್ಮ ಮನೆಗಳಲ್ಲಿ ಟಿಎನ್‌ವಿ ಉಗ್ರಗಾಮಿಗಳಿಗೆ ಆಶ್ರಯ ಕೊಟ್ಟಿದ್ದಾರೆ ಎಂದು ಸುಳ್ಳು ಆರೋಪವನ್ನು ಹೊರಿಸಿ ಸಶಸ್ತ್ರಪಡೆಗಳವರು ವಾರೆಂಟಿಲ್ಲದೆ ಮನೆಗಳನ್ನು ಶೋಧಿಸಿ ಒಳಗಿರುವವರನ್ನು ಹಿಂಸಿಸುತ್ತಿದ್ದಾರೆ.

ಈ ದುಷ್ಟಕೂಟವು (ಸಶಸ್ತ್ರಪಡೆಗಳ ರಕ್ಷಣೆಯಲ್ಲಿ ಕ್ರಿಮಿನಲ್‌ಗಳು) ಶಾಲೆಗಳ ಮೇಲೆ, ಸರ್ಕಾರಿ ಕಛೇರಿಗಳ ಮೇಲೆ ಎಡರಂಗ ಪಕ್ಷಗಳ, ಅದರಲ್ಲೂ

ಮುಖ್ಯವಾಗಿ ಸಿ.ಪಿಐ (ಎಂ) ಕಛೇರಿಗಳ ಮೇಲೆ ದಾಳಿ ಮಾಡಲಾರಂಭಿಸಿತು, ಕೆಂಬಾವುಟಗಳನ್ನು ಸುಟ್ಟಿತು, ಮನೆಗಳಿಗೆ ಹೋಗಿ ಜಬರ್‌ದಸ್ತಿನಿಂದ ಹಣ ವಸೂಲು ಮಾಡಲಾರಂಭಿಸಿತು. ರಾತ್ರೋರಾತ್ರಿ ಸಿ ಪಿ.ಐ.(ಎಂ) ಉದಯಪುರ ಜಿಲ್ಲಾ ಸಮಿತಿಯ ಕಛೇರಿಯ ಬಾಗಿಲನ್ನು ಒಡೆದು ತೆರೆದು [ಆಗ ಅಲ್ಲಿ ಪಕ್ಷದವರು ಒಬ್ಬರೂ ಇರಲಿಲ್ಲ] ಆಕ್ಷೇಪಾರ್ಹವಾದ ವಸ್ತುಗಳನ್ನು ಒಳಗೆ ಇರಿಸಲಾಯಿತು. ಕಾಕ್ರಾಬಾನ್ ಸಿಪಿಐ(ಎಂ) ಶಾಸಕರ ಮೇಲೆ ಸುಳ್ಳುಕೊಲೆ ಮೊಕದ್ದಮೆಯನ್ನು ಹೂಡಲಾಯಿತು. ಸಿ.ಪಿ ಐ (ಎಂ) ಬೆಂಬಲಿಗರನ್ನು ದಸ್ತಗಿರಿ ಮಾಡಿ ಅವರು ಟಿಎನ್‌ವಿಯ ಸಹಚರರೆಂದು ಆಪಾದಿಸಿ ಸಹಸ್ರಾರು ಮೊಕದ್ದಮೆಗಳನ್ನು ಹೂಡಲಾಯಿತು ಈ ಎಲ್ಲಾ ದಬ್ಬಾಳಿಕೆಯು ಗೃಹ ಸಚಿವ ಸಮೀರ್ ರಂಜನ್ ಬರ್ಮನ್‌ರವರ ನೇರವಾದ ನಿರ್ದೇಶನದ ಪ್ರಕಾರ ನಡೆಯುತ್ತಿದೆ.

ಸಂಸ್ಕೃತಿ, ಕಲೆಗಳ ಮೇಲೆ ದಾಳಿ :

ವಾರ್ತೆ ಮತ್ತು ಸಾಂಸ್ಕೃತಿಕ ವ್ಯವಹಾರಗಳ ಇಲಾಖೆಯಲ್ಲಿದ್ದ 89 ಮಂದಿ ಜಾನಪದ ಕಲಾವಿದರನ್ನು ಹೊಸ ಸರ್ಕಾರವು ಯಾವುದೇ ಕಾರಣ ಕೊಡದೆ ಹೊರಗೆ ಹಾಕಿತು. ಗಿರಿಜನ ಮತ್ತು ಗಿರಿಜನೇತರ ವಿಭಾಗಳಿಗೆ ಸೇರಿದ ಈ ಕಲಾವಿದರು ತ್ರಿಪುರ ರಾಜ್ಯದ ಕಲಾಸಂಪತ್ತಾಗಿದ್ದಾರೆ. ಹಿಂದೆ ನಡೆದ ಕೋಮು ಸಂಬಂಧಿ ಮಾರಣಹೋಮದ ತರುವಾಯ ಕವಿಗಳು, ನಾಟಕಕಾರರು, ಬರಹಗಾರರು, ನಟರು, ನೃತ್ಯಪಟುಗಳು ಸೇರಿದಂತೆ ಸುಮಾರು 400 ಕಲಾವಿದರು ತಮ್ಮ ಪ್ರದರ್ಶನಗಳ ಮೂಲಕ ಕೋಮು ಐಕ್ಯತೆ ಮತ್ತು ಕಾರ್ಮಿಕ ಸೌಹಾರ್ದತೆಗಳಿಗಾಗಿ ಹೋರಾಡಿದ ಪರಂಪರೆ ಇರುವ ಕಲಾವಿದರ ಮೇಲೆ ಹೊಸ ಸರ್ಕಾರದ ಪ್ರಹಾರ ಬಿದ್ದಿದೆ. ಮಾರ್ಕ್ಸ್, ಏಂಗೆಲ್ಸ್, ಲೆನಿನ್, ಸ್ಟಾಲಿನ್, ರವೀಂದ್ರನಾಥ ಠಾಕೂರ್, ಕವಿ ನಜರುಲ್ ಇಸ್ಲಾಮ್, ಕವಿ ಸುಕಾಂತ ಭಟ್ಟಾಚಾರ್ಯರ ಭಾವಚಿತ್ರಗಳನ್ನು, ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಸುಟ್ಟು ನಾಶಮಾಡಲಾಯಿತು.

ಕಾರ್ಮಿಕ ಸಂಘಗಳ ಮೇಲೆ ದಾಳಿ :

ಹೊಸ ಸರ್ಕಾರವು ಸಿಐಟಿಯು ಸಂಘಗಳ ಕಛೇರಿಗಳ ಮೇಲೆ, ನೌಕರರ ಸಂಘಗಳ ಮೇಲೆ ದಾಳಿಯನ್ನು ನಡೆಸಿತು. ರೌಡಿಗಳು ಕಾರ್ಮಿಕ-ನೌಕರರನ್ನು

ಐ.ಎನ್.ಟಿ.ಯು.ಸಿ.ಯನ್ನು ಸೇರಬೇಕೆಂದು ಬಲಾತ್ಕಾರ ಮಾಡುತ್ತಿದ್ದಾರೆ. ಇನ್ನೂರಕ್ಕಿಂತಲೂ ಹೆಚ್ಚು ಪ್ಲಾಂಟೇಷನ್ ಕಾರ್ಮಿಕರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ ಅವರನ್ನು ಕಾಡಿಗೆ ಅಟ್ಟಿದ್ದಾರೆ. ತ್ರಿಪುರ ನೌಕರರ ಸಮನ್ವಯ ಸಮಿತಿಯ ಕಛೇರಿಗಳ ಮೇಲೆ ದಾಳಿ ಮಾಡಿ ಅಲ್ಲಿಯ ಕಾರ್ಯಕರ್ತರನ್ನು ಹೊಡೆದು ಹಿಂಸಿಸುತ್ತಿದ್ದಾರೆ. ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಸಮನ್ವಯ ಸಮಿತಿಯ ಹಿರಿಯ ಮುಖಂಡ ವಿಶ್ವನಾಥ ನಾಯಕರನ್ನು ರೌಡಿಗಳು ಕೊಲೆ ಮಾಡಿದರು.

ಸುಳ್ಳು ಕಾರಣಗಳನ್ನು ಕೊಟ್ಟು ತ್ರಿಪುರದಲ್ಲಿರುವ ಎಲ್ಲಾ ಸಿಐಟಿಯು ಸಂಘಗಳ ರಿಜಿಸ್ಟ್ರೇಷನ್ನನ್ನು ಹೊಸ ಸರ್ಕಾರವು ರದ್ದು ಮಾಡಿದೆ. ಒಂದು ಉದಾಹರಣೆಯನ್ನು ನೋಡಿ, ತ್ರಿಪುರದ ಕಾಫಿ ಶ್ರಮಿಕ ಯೂನಿಯನ್ 1986ರ ನವಂಬರ್ 20ರಂದು ರಿಜಿಸ್ಟರ್ ಆಯಿತು. ಸಂಘವು 1987ರ ಆನ್ಯುಯಲ್ ರಿಟರ್ನ್‌ನ್ನು ಕಾರ್ಮಿಕ ಸಂಘಗಳ ನೋಂದಣಾಧಿಕಾರಿಗೆ 1988 ಏಪ್ರಿಲ್ 29 ರಂದು ಸಲ್ಲಿಸಿತು. 1984 ರಿಂದ 1986ರವರೆಗೆ ಆನ್ಯುಯಲ್ ರಿಟರ್ನ್ಸ್‌ನ್ನು ಕೊಟ್ಟಿಲ್ಲವೆಂದು ಸಂಘದ ರಿಜಿಸ್ಟ್ರೇಷನ್ನನ್ನು ರದ್ದು ಮಾಡಲಾಯಿತು. ಸಂಘವು ನೋಂದಣಿಯಾದದ್ದೇ 1986ರ ನವಂಬರ್ 20ರಂದು ಆದರೆ, ಹಿಂದಿನ ವರ್ಷಗಳ ಆನ್ಯುಯಲ್ ರಿಟರ್ನ್ಸ್ ಪ್ರಶ್ನೆ ಬರುವುದಾದರೂ ಹೇಗೆ ?

ಭಾರತ್ ಬಂದ್‌ನಂದು :

ಹೊಸ ಸರ್ಕಾರವು ಕರಾಳವಾದ ರಾಷ್ಟ್ರೀಯ ಭದ್ರತಾ ಶಾಸನವನ್ನು ಉಪಯೋಗಿಸುತ್ತಿದೆ. ಭಾರತ್ ಬಂದ್‌ನಂದು ಎಂದರೆ 15-3-1988ರಂದು ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಮತ್ತು ನಾಲ್ವರು ಮಾಜಿ ಮಂತ್ರಿಗಳು ಸೇರಿದಂತೆ 7000 ಜನರನ್ನು ಬಂಧಿಸಲಾಯಿತು. ಆದರೆ ತ್ರಿಪುರದ ಜನರು ಎಡರಂಗದ ಜತೆ ನಿಂತು ಬಂದ್‌ನ್ನು ಯಶಸ್ವಿಗೊಳಿಸಿದರು.

ಅಂಗಡಿಕಾರರ ಮೇಲೆ ದಾಳಿ :

ಎಡರಂಗವನ್ನು ಬೆಂಬಲಿಸುತ್ತಿದ್ದ ಅಂಗಡಿಕಾರರು, ಹೋಟೆಲಿಟ್ಟವರು ಮತ್ತು ವ್ಯಾಪಾರಿಗಳ ಮೇಲೆ ಗೂಂಡಾಗಳು ಮತ್ತು ಸಶಸ್ತ್ರಪಡೆಗಳ ಮೂಲಕ ಹೊಸ ಸರ್ಕಾರವು ದಾಳಿ ಮಾಡುತ್ತಿದೆ. ಅವರು ಕೇಳಿದುದನ್ನು

ಮತ್ತು ಕೇಳಿದಷ್ಟನ್ನು ಕೊಡದಿದ್ದರೆ ಗೂಂಡಾಗಳು ಅಂಗಡಿ ಮುಂಗಟ್ಟುಗಳನ್ನು ಸುಟ್ಟು ನಾಶಮಾಡುತ್ತಿದ್ದಾರೆ, ಅಂಗಡಿಕಾರರನ್ನು ಹಿಂಸಿಸುತ್ತಿದ್ದಾರೆ.

ಮಹಿಳೆಯರ ಮಾನಭಂಗ :

ಕಮಲಾಪುರ ಸಬ್‌ಡಿವಿಜನ್ನಿನಲ್ಲಿ ಅಸ್ಸಾಮ್ ರೈಫಲ್ಸಿನ ಸೈನಿಕರು ಅಮಿತಾಬ್ ದೇಬ್ ಬರ್ಮರ ಮನೆಗೆ ಹೋದರು. ಈ ಸೈನಿಕರ ಪೈಕಿ ಹದಿಮೂರು ಮಂದಿ ಒಬ್ಬರ ನಂತರ ಒಬ್ಬರು ಅಮಿತಾಬರ ಮಡದಿಯ ಮಾನಭಂಗ ಮಾಡಿದರು.

ಇದೇ ಸಬ್ ಡಿವಿಜನ್ನಿನಲ್ಲಿ ಅಸ್ಸಾಮ್ ರೈಫಲ್ಸಿನ ಯೋಧರು ಜ್ಯೋತಿರ್ಮಯ ದೇಬ್‌ಬರ್ಮರನ್ನು ಮನೆಯ ಹೊರಗೆ ಹಿಡಿದಿಟ್ಟು ಅಡಿಗೆಮನೆಯಲ್ಲಿ ಕೆಲಸ ಮಾಡುತ್ತಿದ್ದ ಅವರ ಹೆಂಡತಿಯ ಮಾನಭಂಗ ಮಾಡಿದರು.

ಸೈನಿಕರು ಮಾಲಿರೋಜಾಪುರಕ್ಕೆ ಮನೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಹುಡುಕಲು ಹೋಗಿ ಆ ಹಳ್ಳಿಯ 70 ರಿಂದ 80 ಮಹಿಳೆಯರ ಬಟ್ಟೆಗಳನ್ನು ಬಿಚ್ಚಿ, ನಗ್ನರನ್ನಾಗಿ ಮಾಡಿ ಬೆಳಗ್ಗೆ 8 ರಿಂದ ಮಧ್ಯಾಹ್ನ 3ರವರೆಗೆ ಬಿಸಿಲಿನಲ್ಲಿ ಸಾಲಾಗಿ ನಿಲ್ಲಿಸಿದರು.

ರಾಯ್‌ಪಾಸಾದಲ್ಲಿ ಒಬ್ಬ ಬಂಗಾಳಿ ಹುಡುಗಿಯ ತಂದೆಯ ಕಣ್ಣೆದುರೇ ಸೈನಿಕರು ಆಕೆಯ ಮಾನಭಂಗ ಮಾಡಿದರು.

ಸೈನಿಕರು 10 ಮತ್ತು 11 ವರ್ಷ ಪ್ರಾಯದ ಇಬ್ಬರು ಗಿರಿಜನ ಬಾಲೆಯರ ಮಾನಭಂಗ ಮಾಡಿದರು. ಅವರಿಗೆ ತೃಪ್ತಿ ಸಿಕ್ಕದಿದ್ದುದರಿಂದ ಅವರ ಮೈಯನ್ನೆಲ್ಲಾ ಕಚ್ಚಿಹಾಕಿದರು ತರುವಾಯ ರಕ್ತದ ಮಡುವಿನಲ್ಲಿ ಆ ಬಾಲೆಯರನ್ನು ಪ್ರಜ್ಞಾಶೂನ್ಯರನ್ನಾಗಿ ಬಿಟ್ಟುಹೋದರು.

ಉತ್ತರ ತ್ರಿಪುರದ ಟಿ.ಟಿ. ಬ್ಲಾಕಿನ ದಲುಚೇರಿ ಹಳ್ಳಿಯ ಪಂಚಾಯತ್ ಸದಸ್ಯ ಟಿ ಯು ಜೆ ಎಸ್ ನ ನಬೇಂದ್ರ ಚಕ್ಮಾರನ 15 ವರ್ಷ ವಯಸ್ಸಿನ ಪುತ್ರಿ ಮೂಕ ಕಿರಣ್ ಮಾಲಾ ಚಕ್ಮಾಳನ್ನು ಇಬ್ಬರು ಸೈನಿಕರು ಮಾನಭಂಗ ಮಾಡಿದರು. ಟಿ ಯು ಜೆ ಎಸ್ ಮುಖಂಡರು ಸೈನ್ಯದ ವಿರುದ್ಧ ದೂರು ಕೊಟ್ಟದ್ದೇ ಆದರೆ ಮಂತ್ರಿಮಂಡಲ ಉರುಳಿ ಹೋಗುವುದೆಂದು ಹೇಳಿ ಈ ಪ್ರಸಂಗವನ್ನು ಬಚ್ಚಿಡಲು ಪ್ರಯತ್ನಿಸಿದರು. ಆದರೆ ಹಳ್ಳಿಗರು ಸುಮ್ಮನಿರಲಿಲ್ಲ.

ಅವರು ಚೆಯಿರ್‌ಲೆಂಗ್ಡಾ ಎಂಬ ಊರಿಗೆ ಹೋಗಿ ಸಿಪಿಐ (ಎಂ) ನಾಯಕತ್ವದಲ್ಲಿ ಬಿಡಿಓಗೆ ದೂರು ಕೊಟ್ಟರು.

ಜಗಬಂಧು ಗ್ರಾಮ ಪಂಚಾಯತ್‌ನ ಧನುರಾಂಪಾರಾ ಎಂಬಲ್ಲಿ ಹತ್ತು ಹನ್ನೆರಡು ಮಂದಿ ಅಸ್ಸಾಂ ರೈಫಲ್ಸ್ ಸೈನಿಕರು ಮಲಯ್ ರಿಯಾಂಗ್‌ನ ಪತ್ನಿ 25 ವರ್ಷ ಪ್ರಾಯದ ಗಾನಪತಿ ರಿಯಾಂಗ್‌ಳನ್ನು, ಬರ್ನಾರಾಮ್ ರಿಯಾಂಗ್‌ನ ಹೆಂಡತಿ 22 ವರ್ಷ ಪ್ರಾಯದ ಖಾಬತಿ ರಿಯಾಂಗ್‌ಳನ್ನು ಕರ್ಮ ಜೋಯ್ ರಿಯಾಂಗ್‌ನ ಮಗಳು 18 ವರ್ಷ ಪ್ರಾಯದ ಅಪ್ಟೇರುಂಗ್ ರಿಯಾಂಗ್‌ಳನ್ನು ಒಬ್ಬರ ನಂತರ ಒಬ್ಬರು ಮಾನಭಂಗ ಮಾಡಿದರು

ಹೊಸ ಸರ್ಕಾರದ ಆಡಳಿತದಲ್ಲಿ, ಮಹಿಳೆಯರ ಮಾನಭಂಗ, ಅದರಲ್ಲೂ ಹೆಚ್ಚಾಗಿ ಗಿರಿಜನ ಪ್ರದೇಶಗಳಲ್ಲಿ ದಿನನಿತ್ಯದ ಪ್ರಕರಣವಾಗಿದೆ. ಸೈನಿಕರ ಮತ್ತು ಅಸ್ಸಾಂ ರೈಫಲ್ಸಿನ ಈ ದುಷ್ಟ ವರ್ತನೆಯಿಂದಾಗಿ ತ್ರಿಪುರವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿದ ಆಜ್ಞೆಯನ್ನು ರಾಜೀವ ಗಾಂಧಿಯವರು ಹಿಂತೆಗೆದುಕೊಳ್ಳಬೇಕು, ಸೇನೆ ಮತ್ತು ಅಸ್ಸಾಂ ರೈಫಲ್ಸನ್ನು ವಾಪಸ್ಸು ಕರೆಸಿಕೊಳ್ಳಬೇಕು ಎಂಬ ಭಾವನೆ ತ್ರಿಪುರದ ಜನರಲ್ಲಿ ವ್ಯಾಪಕವಾಗಿ ಬೆಳೆಯುತ್ತಿದೆ.

ಸಿ ಪಿ.ಐ.(ಎಂ)ನ ಸಂಸತ್ ಸದಸ್ಯರಾದ ಬಾಜುಬಾನ್ ರಿಯಾಂಗ್, ಅಜಯ್ ಬಿಶ್ವಾಸ್, ತ್ರಿಪುರ ವಿಧಾನ ಸಭಾ ಸದಸ್ಯರಾದ ಸಮರ್ ಚೌಧರಿ, ಪೂರ್ಣ ಮೋಹನ ತ್ರಿಪುರ, ಮಖನ್ ಚಕ್ರವರ್ತಿ, ಎಡಿಸಿ ಸದಸ್ಯರಾದ ಸುರೇಂದರ್ ರಿಯಾಂಗ್, ಮನ್ಸಜಯ್ ಮಾಗ್, ರಣಜೀತ್ ದೇಬ್ ಬರ್ಮಾರ ತಂಡವು ಮಾನಭಂಗಗಳು ನಡೆದ ಪ್ರದೇಶವನ್ನು ಸಂದರ್ಶಿಸಿ ಪ್ರಕರಣಗಳ ಬಗ್ಗೆ ಹೇಳಿಕೆಗಳನ್ನು ಪಡೆದುಕೊಂಡು ಅಲ್ಲಿಯ ಜನರಿಗೆ ಧೈರ್ಯ ಹೇಳಿತು. ಎ.ಐ.ಡಿ. ಡಬ್ಲ್ಯು ಎ (ಆಲ್ ಇಂಡಿಯ ಡೆಮೊಕ್ರಾಟಿಕ್ ವುಮೆನ್ಸ್ ಅಸೋಸಿಯೇಷನ್) ನಿಯೋಗವೊಂದು ಜೂನ್ 17 ರಂದು ತ್ರಿಪುರಕ್ಕೆ ಭೇಟಿಕೊಟ್ಟು ಮಾನಭಂಗ ಪ್ರಕರಣಗಳು ನಡೆದ ಖೋನಾಯ್ ಮತ್ತು ಅಮರ್‌ಪುರ್ ಸಬ್ ಡಿವಿಜನ್ನುಗಳಿಗೆ ಭೇಟಿ ಕೊಟ್ಟಿತು. ಈ ನಿಯೋಗದಲ್ಲಿ ಉಪಾಧ್ಯಕ್ಷೆಯರಾದ ಕನಕ್ ಮುಖರ್ಜಿ, ವಿಮಲ ರಣದಿವೆ, ಲಕ್ಷ್ಮಿಸೇಗಾಲೆ, ಇಳಾ ಭಟ್ಟಾಚಾರ್ಯ, ಖಜಾಂಚಿ ಬಿಬಾಘೋಷ್

ಗೋಸ್ವಾಮಿ, ಜಂಟಿ ಕಾರ್ಯದರ್ಶಿ ಶ್ಯಾಮಲ ಗುಪ್ತ ಪಶ್ಚಿಮ ಬಂಗಾಳದ ಶಾಸಕಿ ಕಮಲಸೇನ್ ಗುಪ್ತ ಇದ್ದರು.

1988 ಮೇ 31, ಜೂನ್ 1 ಮತ್ತು 2ರಂದು ಬಹು ದೂರದಲ್ಲಿದ್ದ ಹಳ್ಳಿಯೊಂದರಲ್ಲಿ ಸಶಸ್ತ್ರ ಪಡೆಗಳು 25 ಗಿರಿಜನ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದುದರ ವಿರುದ್ಧವಾಗಿ ಎಡರಂಗದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ದಶರಥದೇಬ್‌ರವರು ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಾಧೀಶರಿಗೆ ಲಿಖಿತ ದೂರು ಕೊಟ್ಟಿದ್ದಾರೆ.

ನ್ಯಾಯಾಂಗದ ಮೇಲೆ ಆಕ್ರಮಣ

ಹೊಸ ಸರ್ಕಾರ ಬಂದ ನಂತರ ರಾಜ್ಯದಲ್ಲಿ ಸಂಸದೀಯ ಮತ್ತು ಪ್ರಜಾ ಪ್ರಭುತ್ವದ ನಿಯಮಗಳ ಉಲ್ಲಂಘನೆ ದಿನನಿತ್ಯ ನಡೆಯುತ್ತಿದೆ. ಕಾಂಗ್ರೆ-ಟಿ ಯು.ಜೆ.ಎಸ್. ಮೈತ್ರಿಯು ತ್ರಿಪುರದಲ್ಲಿ ಎಡಪಕ್ಷಗಳನ್ನು ರಾಜಕೀಯ ವಾಗಿ, ಚುನಾವಣೆಯಲ್ಲಿ ಮತ್ತು ದೈಹಿಕವಾಗಿ ನಾಶ ಮಾಡಲು ಸೇನೆ, ಪೋಲೀಸು, ಸಶಸ್ತ್ರ ಪಡೆಗಳು ಮತ್ತು ಕಸಬುದಾರಿ ಕ್ರಿಮಿನಲ್‌ಗಳನ್ನು ಉಪಯೋಗಿಸುತ್ತಿದೆ ಇತರ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಕೆಡವಿದ ಮೈತ್ರಿ ಸರ್ಕಾರವು ನ್ಯಾಯಾಂಗವನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಲು ಹೊರಟಿದೆ.

ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರು ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಾಧೀಶರಿಗೆ ಬರೆದಿರುವ ಪತ್ರದಲ್ಲಿ ತ್ರಿಪುರದ ಕೆಲವು ನ್ಯಾಯಾಧೀಶರು ಪಕ್ಷಪಾತಿಗಳಾಗಿ ವರ್ತಿಸುತ್ತಾರೆಂದು ತಿಳಿಸಿ ಅದಕ್ಕೆ ಸಂಬಂಧಿಸಿದ ಸಾಕ್ಷ್ಯ ಸಾಮಗ್ರಿಗಳನ್ನು ಒದಗಿಸಿದ್ದಾರೆ. ತ್ರಿಪುರದ ಗೃಹ ಸಚಿವರು ತಮ್ಮ ಛೇಂಬರಿನಲ್ಲಿ ತ್ರಿಪುರದ ನ್ಯಾಯಾಧೀಶರ ಸಭೆಯನ್ನು 1988 ಮೇ 22ರಂದು ಕರೆದುದು ತಿಳಿದು ಬರುತ್ತದೆ.

ಸಿಪಿಐ(ಎಂ)ನ್ನು ನಾನು ಅಳಿಸಿ ಹಾಕುತ್ತೇನೆ
—ತ್ರಿಪುರದ ಕಾಂಗ್ರೆ ಗೃಹಮಂತ್ರಿ

ತ್ರಿಪುರದ ಗೃಹಮಂತ್ರಿ ಸಮೀರ್ ರಂಜನ್ ಬರ್ಮರು ಈ ರೀತಿ ಘೋಷಿ ಸಿದ್ದಾರೆ. "ಇಲ್ಲಿಂದಾಚೆಗೆ ಸಾಲಮೇಳದಲ್ಲಿ ಕೊಡುವ ಸಾಲ, ಐ.ಆರ್.ಡಿ.ಪಿ., ಸರ್ಕಾರಿ ನೌಕರಿ ಒಳಗೊಂಡು ಸರ್ಕಾರ ಕೊಡುವ ಎಲ್ಲಾ ಪರಿಹಾರಗಳೂ

ಕಾಂಗ್ರೆ ಮತ್ತು ಟಿಯುಜೆಎಸ್‌ನ ಕ್ರಿಯಾಶೀಲ ಕಾರ್ಯಕರ್ತರಿಗೆ ಮಾತ್ರ ಸಿಕ್ಕುತ್ತವೆ. ಸಿಪಿಐ(ಎಂ)ಗೆ ಸೇರಿದ ಯಾರಿಗೂ ಇವು ಸಿಕ್ಕುವುದಿಲ್ಲ. ಯಾವುದೇ ಪ್ರದೇಶದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಕ್ರಿಯಾಶೀಲರಾಗಿದ್ದರೆ, ಸರ್ಕಾರವನ್ನು ಟೀಕಿಸಿದರೆ ಅವರಿಗೆ ನಮ್ಮ ಯುವಕರು ಸರಿಯಾದ ಪಾಠ ಕಲಿಸುತ್ತಾರೆ. ಪೋಲೀಸರು ನಮ್ಮ ಯುವಕರೊಂದಿಗೆ ಸಂಪೂರ್ಣವಾಗಿ ಸಹಕರಿಸುತ್ತಾರೆ. ಪೋಲೀಸರೊಂದಿಗೆ ಸರಿಯಾಗಿ ವರ್ತಿಸಬೇಕೆಂದೂ, ಪೋಲೀಸರು ನಿಮ್ಮೊಂದಿಗೆ ಸದಾ ಸಹಕರಿಸುವರೆಂದೂ ನಮ್ಮ ಯುವಕರಿಗೆ ಹೇಳುತ್ತಿದ್ದೇನೆ. ಯಾವನೇ ಉಪಾಧ್ಯಾಯ ಅಥವಾ ಸರ್ಕಾರಿ ನೌಕರ ತನ್ನ ಕರ್ತವ್ಯವನ್ನು ಅಲಕ್ಷಿಸಿ ಸರ್ಕಾರವನ್ನು ಟೀಕೆ ಮಾಡಿದ್ದೇ ಆದರೆ ಯುವ ಕಾಂಗ್ರೆಯವರು ಅಂತಹವರನ್ನು ಗುರುತಿಸಿ ಶಿಕ್ಷಿಸುತ್ತಾರೆ. ನಮ್ಮ ಸರ್ಕಾರ ಅಸಮರ್ಥವಾಗಿದೆಯೆಂದೂ, ಅದು ಒಡೆದುಹೋಗುವುದೆಂದೂ ಸಿಪಿಐ(ಎಂ)ನವರು ಹೇಳುತ್ತಾರೆ. ಸಮೀರ್ ರಂಜನ್ ಬರ್ಮನ್‌ನಾದ ನಾನು ನಿಮಗೆ ಹೇಳುತ್ತೇನೆ, ನಾನು ಜೀವಂತವಾಗಿ ಇರುವತನಕ ತ್ರಿಪುರದ ನೆಲದ ಮೇಲೆ ಸಿಪಿಐ(ಎಂ)ನ್ನು ಇರಗೊಡುವುದಿಲ್ಲ. ನಾನು ಅವರನ್ನು ಅಳಿಸಿ ಹಾಕುತ್ತೇನೆ, ಮತ್ತೆ ಅಧಿಕಾರಕ್ಕೆ ಬರುವ ಅವರ ಕನಸನ್ನು ಕೊಂದು ಹಾಕುತ್ತೇನೆ. ಮುಂದಿನ ಐದು ವರ್ಷಗಳಲ್ಲಿ ಸಿಪಿಐ(ಎಂ)ನ ಒಂದು ಪಿಳ್ಳೆಯನ್ನೂ ಉಳಿಸುವುದಿಲ್ಲ, ಯುವಕಾಂಗ್ರೆನ ಯುವಕರೇ ಶಾಲೆಗಳಲ್ಲಿ ಉಪಾಧ್ಯಾಯರ ಚಟುವಟಿಕೆಗಳ ಮೇಲೆ, ಸರ್ಕಾರಿ ಕಛೇರಿಗಳಲ್ಲಿರುವ ನೌಕರರ ಮೇಲೆ ನಿಗಾ ಇಟ್ಟು ತಮ್ಮ ಕರ್ತವ್ಯಗಳನ್ನು ಅಲಕ್ಷಿಸುವವರ ವಿರುದ್ಧವಾಗಿ ಕ್ರಮವಹಿಸಿರಿ".

ಮೇಲೆ ಹೇಳಿದ ದಾಳಿ-ದೌರ್ಜನ್ಯಗಳನ್ನು ಕಾಂಗ್ರೆ ಗೃಹ ಸಚಿವರ ಈ ವಾಕ್ಯಗಳ ಬೆಳಕಿನಲ್ಲಿ ನೋಡಬೇಕು.

ಸಚಿವರ ವಿಚಾರಧಾರೆಗೆ ಅನುಗುಣವಾಗಿರುವ ಒಂದೆರಡು ಚಿತ್ರಹಿಂಸೆಯ ಪ್ರಕರಣಗಳನ್ನು ಕುರಿತು ಆಲೋಚಿಸೋಣ.

ಅಗರ್ತಲಾದಲ್ಲಿರುವ ದೀಪಕ್ ಮಜುಮ್‌ದಾರ್ ಜಿ ಬಿ. ಆಸ್ಪತ್ರೆಯ ನೌಕರರ ಜನಪ್ರಿಯ ಮುಖಂಡ. ಕಾಂಗ್ರೆಯವರು ಒಂದು ರಾತ್ರಿ ಅವರ ಮನೆಯ ಮೇಲೆ ದಾಳಿ ಮಾಡಿ ಅವರನ್ನು ಸಿಕ್ಕಾಪಟ್ಟೆ ಥಳಿಸಿದ ನಂತರ ಸಿ ಆರ್.ಪಿ.ಯವರ ಕೈಗೆ ಕೊಟ್ಟರು. ಸಿ.ಆರ್.ಪಿ. ಅವರನ್ನು ಚಿತ್ರಹಿಂಸೆಗೆ

ಗುರಿ ಮಾಡಿ ಅರೆಜೀವ ಮಾಡಿ ಹೋದರು. ನ್ಯಾಯಾಲಯವು ಆಜ್ಞೆ ಮಾಡಿದ ಹೊರತು ಅವರಿಗೆ ಜಿ.ಬಿ. ಆಸ್ಪತ್ರೆ ಚಿಕಿತ್ಸೆ ಕೊಡುವಂತಿಲ್ಲ.

ಸಿ.ಐ.ಟಿ.ಯು. ಮುಖಂಡ ಧರ್ಮದಾಸ್ ಎಫ್.ಸಿ.ಐ ನ ಅಗರ್ತಲ ಉಗ್ರಾಣದಲ್ಲಿ ಮೂಟೆಗಳನ್ನು ಇಳಿಸಿ, ತುಂಬಿಸುವ ಒಬ್ಬ ಕಾರ್ಮಿಕರು. ಅವರನ್ನು ಅವರ ಮಗನನ್ನೂ ಬಂಧಿಸಿ ಪೋಲೀಸರು ಲಾಕಪ್ಪಿನಲ್ಲಿ ಇಬ್ಬರನ್ನೂ ಬೆತ್ತಲೆ ಮಾಡಿ ಇಟ್ಟರು.

ಸಿ.ಪಿ.ಐ.(ಎಂ)ನ ಸಬ್‌ರೂಮ್ ಜಿಲ್ಲಾ ಸಮಿತಿಯ ಸದಸ್ಯ ಮಲಯ್ ದಿವಾನರನ್ನು ಸೇನೆಯ ಮೇಜರ್ ಥಾಪಾ ಎಂಬುವರು ಬಂಧಿಸಿ ಚಿತ್ರಹಿಂಸೆ ಕೊಟ್ಟರು. ಮೇಜರ್ ಪದೇ ಪದೇ ಹೇಳಿದ ಆರೋಪಗಳನ್ನು ದಿವಾನರು ಒಪ್ಪಿಕೊಳ್ಳದಿದ್ದುದರಿಂದ ಬಾಗಿಲು ಕಿಟಕಿಗಳನ್ನು ಮುಚ್ಚಿ ಬೆತ್ತಲೆ ಮಾಡಿ ಒಂದು ಗಂಟೆಯ ಕಾಲ ತಲೆಕೆಳಗೆ ಕಾಲು ಮೇಲೆ ಮಾಡಿ ನೇತು ಹಾಕಿದರು. ಅನಂತರ ಅವರನ್ನು ಹೊರಗೆ ಬಿಸಿಲಿನಲ್ಲಿ ನಲವತ್ತು ನಿಮಿಷ ಕಾಲ ಅದೇ ಭಂಗಿಯಲ್ಲಿ ನೇತು ಹಾಕಿದರು, ಅನಂತರ ಅವರು ತನ್ನ ಕಾಲುಗಳ ಮೇಲೆ ನಿಲ್ಲಲು ಸಾಧ್ಯವಾಗದೆ ಹೋದ ಮೇಲೆ ಚಿತ್ರಹಿಂಸೆ ಮುಕ್ತಾಯವಾಯಿತು.

ಜನಪ್ರಿಯ ಮುಖಂಡರಾದ, ಎಡರಂಗ ಸರ್ಕಾರದಲ್ಲಿ ಸಚಿವರಾಗಿದ್ದ ಹಾಲಿ ಶಾಸಕರಾಗಿರುವ ಅನಿಲ್ ಸರ್ಕಾರ್, ಬಾದಲ್ ಚೌಧರಿಯವರನ್ನು ಕೊಲೆ ಮಾಡುವ ಪ್ರಯತ್ನಗಳು ನಡೆದಿವೆ. ಸಮೀರ್‌ರಂಜನ್ ಬರ್ಮನ್‌ರು ಇತಿಹಾಸವತ್ತ ನೋಡಬೇಕು. ಹಿಟ್ಲರಸಿಗಿಂತಲೂ ಬರ್ಮನ್‌ರು ದೊಡ್ಡವರೇನಲ್ಲ. ಹಿಟ್ಲರನ ಗತಿ ಏನಾಯಿತು ? ಸಿಪಿಐ(ಎಂ)ನ್ನು ತ್ರಿಪುರದ ನೆಲದಿಂದ ಅಳಿಸಿ ಹಾಕುತ್ತೇನೆ ಎಂಬ ಬೆದರಿಕೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುವುದಿಲ್ಲ, ಜನರು ಅದನ್ನು ಬಿಡುವುದಿಲ್ಲ.

ಪೋಲೀಸರ ಅಥವಾ ಸಶಸ್ತ್ರ ಪಡೆಗಳ ಬೆಂಗಾವಲಿನಲ್ಲಿ ಸಮಾಜ ವಿರೋಧಿ ರೌಡಿಗಳು ಕ್ರಿಮಿನಲ್‌ಗಳು ಸಾಮಾನ್ಯ ಪ್ರಜೆಗಳ ಮೇಲೆ, ಅವರ ರಾಜಕೀಯ ವಿಚಾರಧಾರೆ ಬೇರೆ ಎಂಬುದಕ್ಕೆ, ದಾಳಿ ಮಾಡುವುದು, ದಾಳಿಗೆ ಗುರಿಯಾದವರ ಮೇಲೆ ಸಶಸ್ತ್ರ ಪಡೆಗಳು ಎರಗುವುದು, ಪೋಲೀಸರು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದು.

ಪಶ್ಚಿಮ ಬಂಗಾಳದಲ್ಲಿ 1972ರಲ್ಲಿ ವಿಧಾನಸಭಾ ಚುನಾವಣೆಯನ್ನು 'ರಿಗ್'

ಮಾಡಿದನಂತರ ಹರಿಬಿಟ್ಟ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ನೆನಪಿಗೆ ತರುತ್ತದೆ. ಅದೇ ವರ್ಷ ಜುಲೈ ತಿಂಗಳಲ್ಲಿ ಮಧುರೆಯಲ್ಲಿ ನಡೆದಸಿಪಿಐ(ಎಂ)ನ ಒಂಬತ್ತನೆಯ ಅಧಿವೇಶನವು ಪಶ್ಚಿಮ ಬಂಗಾಳದ ಅಂದಿನ ವಿದ್ಯಮಾನಗಳು ಭಾರತದಲ್ಲಿ ಬರಲಿರುವ ಆಪತ್ಕಾಲದ ಮುನ್ಸೂಚನೆ ಎಂದು ಬಣ್ಣಿಸಿ ಬೆಳೆಯುತ್ತಿರುವ ಏಕ ಪಕ್ಷ-ಏಕ ವ್ಯಕ್ತಿಯ ಸರ್ವಾಧಿಕಾರದ ವಿರುದ್ಧವಾಗಿ ಪ್ರಜಾಪ್ರಭುತ್ವ ವಾದಿಗಳೆಲ್ಲಾ ಒಂದಾಗಿ ಹೋರಾಡಲು ಕರೆಕೊಟ್ಟದ್ದಿತು. ಆದರೆ ಇತರ ವಿರೋಧ ಪಕ್ಷಗಳು ಈ ಕರೆಗೆ ಕಿವಿ ಗೊಡಲಿಲ್ಲ. 1975ರ ಜೂನ್ 26 ರಂದು ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿದನಂತರ ಕೆಲವರಿಗೆ ಈ ಕರೆಯು ನೆನಪಾಯಿತು.

ಬೆಳೆಯುತ್ತಿರುವ ಪ್ರತಿರೋಧ

ಕಾಂಗ್ರೆ-ಟಿ ಯು ಜೆ ಎಸ್ ಕೂಟ ಅಧಿಕಾರಕ್ಕೆ ಬಂದ ಕೂಡಲೇ ಪ್ರಾರಂಭವಾದ ಭಯೋತ್ಪಾದಕ ತಂತ್ರಗಳು ಮುಂದುವರಿಯುತ್ತಿರುವಂತೆಯೇ ಅಗರ್ತಲಾದ ಮಕ್ಕಳ ಉದ್ಯಾನವನದಲ್ಲಿ ಸಿಪಿಐ(ಎಂ)ನ ಸಾದರ್ ಜಿಲ್ಲಾ ಸಮಿತಿಯ ಆಶ್ರಯದಲ್ಲಿ 15 ಸಹಸ್ರ ಜನರು ಭಾಗವಹಿಸಿದ್ದ ಬಹಿರಂಗ ಸಭೆಯೊಂದು ನಡೆಯಿತು. ಸಭೆಗೆ ಜನರು ಬರದಂತೆ ಮಾಡಲು ಸರ್ಕಾರವು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಈ ಎಲ್ಲಾ ಜನರು ಬಂದಿದ್ದು ಅಗರ್ತಲಾ ನಗರದ ವಿವಿಧ ಭಾಗಗಳಿಂದ. ಸಭೆ ನಡೆಸಲು, ಧ್ವನಿವರ್ಧಕವನ್ನು ಉಪಯೋಗಿಸಲು ಸರ್ಕಾರವು ಲೈಸೆನ್ಸ್ ಕೊಟ್ಟಿರಲಿಲ್ಲ. ಆದರೂ ಸಹ ಜನರ್ರು ಬಂದರು, ಬಹಿರಂಗ ಸಭೆ ಯಶಸ್ವಿಯಾಗಿ ನಡೆಯಿತು. ಭಾನುಘೋಷ ಅಧ್ಯಕ್ಷ ತೆಯಲ್ಲಿ ನೃಪೇನ್ ಚಕ್ರವರ್ತಿ, ದಶರಥದೇವ್ ಮಾತನಾಡಿದರು. ಆ ಸಭೆಯ ಕ್ರಾಂತಿ ಗೀತೆಗಳು, ಭಾಷಣಗಳು ಜನರಿಗೆ ಒಂದು ಹೊಸ ಸ್ಫೂರ್ತಿಯನ್ನು ಕೊಟ್ಟವು.

ಫೆಬ್ರುವರಿ 2 ರಂದು ತ್ರಿಪುರ ಚುನಾವಣೆ ನಡೆದ ನಂತರ ಮಾರ್ಚ್ 15 ರಂದು ನಡೆದ ಚಾರಿತ್ರಿಕ ಭಾರತ್ ಬಂದ್, ಮೂರು ದಿವಸಗಳ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ, ಏಳುಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರ ಒಂದು ವಾರದ ಮುಷ್ಕರ ರಾಜೀವ ಗಾಂಧಿಯವರ ಕಾಂಗ್ರೆ ಸರ್ಕಾರದ ಸರ್ವಾಧಿಕಾರಿ

ಅಧಿಕಾರಶಾಹಿ ಧೋರಣೆಯ ವಿರುದ್ಧವಾಗಿ, ಪ್ರಜಾಪ್ರಭುತ್ವ, ನಾಗರೀಕ ಸ್ವಾತಂತ್ರ್ಯ ಮತ್ತು ದೇಶದ ಐಕ್ಯತೆಯ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟಗಳ ಮುಖ್ಯ ಭಾಗಗಳಾಗಿವೆ.

ಮಹಾರಾಷ್ಟ್ರದಲ್ಲಿ ಫೆಬ್ರವರಿ 18 ರಂದು ಮುಂಬಯಿ ಸೇರಿದಂತೆ ವಿವಿಧ ಕೇಂದ್ರಗಳಲ್ಲಿ ತ್ರಿಪುರದ ಪ್ರತಿರೋಧಿ ಹೋರಾಟವನ್ನು ಬೆಂಬಲಿಸುವ ಬಹಿರಂಗ ಸಭೆಗಳನ್ನು ಎಡಪಕ್ಷಗಳು ನಡೆಸಿವೆ.

ಆಂಧ್ರಪ್ರದೇಶ, ಒರಿಸ್ಸಾದ ರೂರ್ಕೇಲಾ, ಹರಿಯಾಣದ ಹಿಸ್ಸಾರ್ ತ್ರಿಪುರದ ಜನತೆಗೆ ಬೆಂಬಲಕೊಡುವ ಸಭೆಗಳು ನಡೆದಿವೆ.

ಪಶ್ಚಿಮ ಬಂಗಾಳದಲ್ಲಿ ಫೆಬ್ರವರಿ 10 ರಂದು ತ್ರಿಪುರಕ್ಕೆ ಸೌಹಾರ್ದ ಬೆಂಬಲದ ಚಳುವಳಿ ರಾಜ್ಯಾದ್ಯಂತ ನಡೆದಿದೆ.

ಸಂಸತ್ತಿನಲ್ಲಿ ತ್ರಿಪುರದ ಬೆಳವಣಿಗೆಗಳು ಪ್ರಸ್ತಾಪವಾಗಿವೆ.

1972 ಕ್ಕೂ 1988 ಕ್ಕೂ ಜಾಗತಿಕ ಪರಿಸ್ಥಿತಿಯಲ್ಲಿ ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಬಹಳ ವ್ಯತ್ಯಾಸಗಳಿವೆ. ಸರ್ವಾಧಿಕಾರದ ವಿರುದ್ಧ ಚಳುವಳಿ ಇಂದು ಅಂದಿಗಿಂತಲೂ ಶಕ್ತಿಯುತವಾಗುವುದು.

ಆದರೆ ಇಂದು ತ್ರಿಪುರದಲ್ಲಿ ನಡೆಯುತ್ತಿರುವ ಅರೆಫ್ಯಾಸಿಸ್ಟ್ ದಬ್ಬಾಳಿಕೆಯ ವಿರುದ್ಧವಾಗಿ ನಡೆಯುತ್ತಿರುವ ಪ್ರತಿರೋಧಕ್ಕೆ ದೇಶದಾದ್ಯಂತವಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು, ಕಾರ್ಮಿಕರು, ರೈತರು, ಮಹಿಳೆಯರು ವಿದ್ಯಾರ್ಥಿ-ಯುವಜನರು ಎಲ್ಲಾ ರೀತಿಯ ಬೆಂಬಲ ಕೊಡಬೇಕು.

ತ್ರಿಪುರದಲ್ಲಿ ಭಾರತದ ಪ್ರಜಾಪ್ರಭುತ್ವದ ಮೇಲೆ ಆಕ್ರಮಣ ನಡೆದಿದೆ. ಇದು ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಮುಂಬರುವ ಪರಿಸ್ಥಿತಿಯ ಮುನ್ಸೂಚನೆ ಎಂಬುದು ನಿಸ್ಸಂದೇಹ.

ತ್ರಿಪುರದ ... ಮಿಡಿಯುವ ಜನತೆಗೆ
ಒಂದು ಆಶಾಕಿ... ನಡೆಯುತ್ತಿರುವ ಪ್ರತಿ
ರೋಧಿ ಹೋ... ಜನತೆಯ ಪ್ರಜಾ
ಪ್ರಭುತ್ವದ ಹೋ...



ನೃಪೇನ್ ಚಕ್ರವರ್ತಿ

ಭಾರತದ ರಾಜ್ಯಗಳೊಂದರಲ್ಲಿ ಒಬ್ಬ ಮುಖ್ಯಮಂತ್ರಿ ಇದ್ದರು. ಅವರು ಹತ್ತು ವರ್ಷಗಳ ಕಾಲ ಆಳಿದರು. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಅವರು ತಮ್ಮ ಆಹಾರವನ್ನು ತಾವೇ ತಯಾರಿಸುತ್ತಿದ್ದರು ಮತ್ತು ತಮ್ಮ ಉಡುಪುಗಳನ್ನು ತಾವೇ ಶುಭ್ರ ಮಾಡುತ್ತಿದ್ದರು. ಅವರು ಪಡೆಯುತ್ತಿದ್ದ ಸಂಬಳದಲ್ಲಿ ತಮ್ಮ ಖರ್ಚನ್ನು ಕಳೆದು ಉಳಿದ ಹಣವನ್ನು ಅವರ ಪಕ್ಷಕ್ಕೆ ಕೊಡುತ್ತಿದ್ದರು. ಅವರು ತಮ್ಮ ಅವಧಿಯು ಮುಗಿದ ನಂತರ ಅದೇ ದಿವಸವೇ ಮುಖ್ಯಮಂತ್ರಿಯುವರ ಅಧಿಕೃತ ನಿವಾಸವನ್ನು ಖಾಲಿ ಮಾಡಿದರು. ಪುಸ್ತಕಗಳು ಮತ್ತು ಬಟ್ಟೆಗಳಿಂದ ಕೂಡಿದ ಎರಡು ಸೂಟ್‌ಕೇಸುಗಳನ್ನು ಮಾತ್ರ ಅವರು ತೆಗೆದುಕೊಂಡು ಹೋದರು. ಅವರಿಗೆ ತಮ್ಮದೇ ಆದ ಮನೆಯಿರಲಿಲ್ಲ. ಅವರು ಪಕ್ಷದ ಕಛೇರಿಯ ಒಂದು ಕೊಠಡಿಗೆ ಹೋದರು.

ಭಾರತದಲ್ಲಿ ಒಬ್ಬ ಮುಖ್ಯಮಂತ್ರಿ ಹೇಗೆ ಬದುಕಬೇಕು ಎಂಬುದರ ಕುರಿತು ಒಬ್ಬ ಆದರ್ಶವಾದಿಯು ಬರೆದ ಒಂದು ಕಾದಂಬರಿಯ ಭಾಗವಲ್ಲ. ನಿನ್ನೆಯ ದಿನಪತ್ರಿಕೆಗಳನ್ನು(ತಮಿಳು) ಹುಡುಕಿದರೆ ಈ ದೊಡ್ಡ ಸುದ್ದಿ ಅಚ್ಚಾಗಿರುವುದನ್ನು ನೋಡಬಹುದು.

ಈ ನಂಬಲು ಕಷ್ಟವಾದ ಆದರೆ ಸತ್ಯವಾದ ಕತೆಯು ತ್ರಿಪುರದಲ್ಲಿ ನಡೆಯಿತು. ಮುಖ್ಯಮಂತ್ರಿಯ ಹೆಸರು ನೃಪೇನ್ ಚಕ್ರವರ್ತಿ. ಅವರು ಸಿಪಿಐ(ಎಂ)ಗೆ ಸೇರಿದವರು, ಅದಕ್ಕಿಂತಲೂ ಮುಖ್ಯವಾಗಿ ಅವರು ಸಂಪೂರ್ಣ ಪ್ರಾಮಾಣಿಕ ವ್ಯಕ್ತಿ.

['ದಿನಮಣಿ' ದೈನಿಕದ 1988ರ ಫೆಬ್ರವರಿ 9 ರ ಸಂಪಾದಕೀಯದಿಂದ]